WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2009

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-9 ಸಂಚಿಕೆ-1 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

## "ಧಾರ್ಮಿಕ ಅಂಧಶ್ರದ್ಧೆ ಬಿಟ್ಟಲ್ಲಿ ಸಮಾಜವು ಸುಸಂಸ್ಕೃತ" : ಶಾಸಕ ಕೆ. ರಘುಪತಿಭಟ್

**"ದೇಶವು ಇಂದು ಎದುರಿಸುತ್ತಿರುವ ಸಮಸ್ಯೆಗಳಲ್ಲಿ 'ಭಯೋತ್ಪಾದನೆ'ಯು ಪ್ರಮುಖ ಸ್ಥಾನ ಪಡೆದಿದೆ. ಈ ಭಯೋತ್ಪಾದನೆಗೆ ಧರ್ಮ ಜಾತಿಯ ಬಗ್ಗೆ ಇರುವ ಅಂಧಶ್ರದ್ಧೆಯೇ ಕಾರಣ. ಈ ಬಗ್ಗೆ ವಿಶಾಲ ಮನಸ್ಸನ್ನು ಹೊಂದಿ ವಿಶ್ವಭ್ರಾತೃತ್ವದ ಕಲ್ಪನೆಯನ್ನೂ ಮಾಡಿದಲ್ಲಿ ಸುಸಂಸ್ಕೃತ ಸಮಾಜದ ನಿರ್ಮಾಣವಾಗಿ ದೇಶವು ಬಲಾಢ್ಯವಾಗುವುದರಲ್ಲಿ ಸಂಶಯವಿಲ್ಲ; ಜಾತೀಯ ಸಂಘಟನೆಗಳು ಒಂದು ನಿರ್ದಿಷ್ಟ ಪರಿಧಿಯಲ್ಲಿ ಒಂದು ಸಮಾಜ ಅಭಿವೃದ್ಧಿಗೆ ಶ್ರಮಿಸುವುದರಿಂದ ಇದು 'ಸಂಕುಚಿತ ಭಾವನೆ' ಎಂಬ ಹಣೆಪಟ್ಟಿಯನ್ನು ಕಳಚಿಕೊಂಡು ಒಟ್ಟು ಸಮಾಜದ ಏಳಿಗೆಯ ರೂವಾರಿಗಳಗಿ ಮಹತ್ವ ಪಡೆಯುತ್ತದೆ" ಎಂದು ಉಡುಪಿಯ ವಿಧಾನ ಸಭಾ ಶಾಸಕರಾದ ಶ್ರೀ ಕೆ. ರಘುಪತಿಭಟ್ ಹೇಳಿದರು.**

ಅವರು ಉಡುಪಿಯ ಶ್ರೀ ಶಾರದಾ ಮಂಟಪ ಸಂಕೀರ್ಣದಲ್ಲಿ ನಿರ್ಮಾಣಗೊಂಡ ಶ್ರೀ ಶಾರದಾ ದೇವಸ್ಥಾನದ ಮುಂಭಾಗದ ಸ್ವಾಗತ ಗೋಪುರ, ಶ್ಯಾಮರಾವ್ ಸಭಾಭವನ, ಗೋಪಣ್ಣಯ್ಯ ಗಂಗಮ್ಮ ಸಭಾಭವನಗಳ ಉದ್ಘಾಟನಾ ಸಮಾರಂಭದಲ್ಲಿ ಈ ರೀತಿ ಅಭಿಪ್ರಾಯಪಟ್ಟರು.

ಉಡುಪಿಯಲ್ಲಿ ಮದುವೆ ಮತ್ತಿತರ ಯಾವುದೇ ಸಮಾರಂಭಗಳಿಗೆ ಪ್ರಥಮ ಪ್ರಾಶಸ್ತ್ಯದ ಸಭಾಭವನವಾಗಿ ಎದ್ದು ನಿಂತಿರುವ ಶ್ರೀ ಶಾರದಾ ಮಂಟಪವು ಒಂದು ಸಾಮಾಜಿಕ ಆಸ್ತಿ ಇದ್ದಂತೆ. ಇಲ್ಲಿಯ ಸಭಾಭವನದಲ್ಲಿರುವ ಸಕಲ ಸವಲತ್ತುಗಳು ಅತ್ಯುತ್ತಮ ದರ್ಜೆಯಲ್ಲಿದ್ದು ಎಲ್ಲರ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿದೆ. ಅಲ್ಲದೆ ಇದಕ್ಕಾಗಿ ಶ್ರಮಿಸುತ್ತಿರುವ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೇವಲ ಸಭಾಭವನದ ಬಗ್ಗೆ ಮಾತ್ರ ಗಮನವೀಯದೆ ಆಸುಪಾಸಿನ ಜನರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸಲು ಸುಂದರವಾದ ಶ್ರೀ ಶಾರದಾ ದೇವಸ್ಥಾನ, ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸಹಕಾರವಾಗುವ ವಿದ್ಯಾರ್ಥಿವೇತನ ವಿತರಣೆ ಮೊದಲಾದ ಚಟುವಟಿಕೆಗಳನ್ನು ನಡೆಸಿ ಕಾರ್ಯಕ್ರಮಗಳು ನಿರಂತರ ನಡೆಯುವಂತೆ ಯೋಚಿಸಿ, ಗುರಿಗಳನ್ನು ಇಟ್ಟು ಕೆಲಸ ಮಾಡುತ್ತಿದೆ. ಈ ಸಾಮಾಜಿಕ ಸಂಘಟನೆ ಬಗ್ಗೆ ಸಂಘವನ್ನು ಶಾಸಕನ ನೆಲೆಯಿಂದ ಅಭಿನಂದಿಸುತ್ತೇನೆ ಎಂದು ಹೇಳಿದರು.

ಬೆಳಿಗ್ಗೆ ಆಗಮಿಸಿದ ಅತಿಥಿಗಳನ್ನು ಜ್ಞಾನಮಂದಿರದಲ್ಲಿ ಸಾಂಕೇತಿಕವಾಗಿ ಸ್ವಾಗತಿಸಿ ಲಘುಪಾನೀಯ ನೀಡಲಾಯಿತು. ನಂತರ ಶ್ರೀ ಶಾರದಾ ದೇವಸ್ಥಾನಕ್ಕೆ ಎಲ್ಲರೂ ಜೊತೆಯಾಗಿ ಬಂದು ಶ್ರೀ ದೇವರಿಗೆ ಮಂಗಳಾರತಿಯಾಗಿ ಅತಿಥಿಗಳಿಗೆ ಪ್ರಸಾದ ವಿತರಣೆಯಾಯಿತು. ಶ್ರೀ ಶಾರದಾ ದೇವಸ್ಥಾನದ ನೂತನ ಸ್ವಾಗತ ಗೋಪುರವನ್ನು ಶಾಸಕ ಶ್ರೀ ರಘುಪತಿಭಟ್ಟರು ರಿಬ್ಬನ್ ಬಿಡಿಸಿ ಉದ್ಘಾಟಿಸಿದರು. ಅಲ್ಲಿಂದ ಬಾಲ್ಕನಿಗೆ ತೆರಳಿ ನೂತನ ನವೀಕರಣಗೊಂಡ ಶ್ಯಾಮರಾವ್ ಹಾಲ್‌ನ್ನುಅತಿಥಿ ಹಾಗೂ ದಾನಿ ಬೆಂಗಳೂರಿನ ಶ್ರೀ ರವೀಂದ್ರನಾಥ್ ಬೆಳ್ಳೆಯವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ನಗರಸಭಾ ಸದಸ್ಯರಾದ ಶ್ರೀ ಮೋಹನ್ ಉಪಾಧ್ಯಾಯರು ಗೋಪಣ್ಣಯ್ಯ-ಗಂಗಮ್ಮ ಸಭಾಭವನವನ್ನು ಕಳಸಿಗೆ ಅಕ್ಕಿಯಲ್ಲಿ ತಾಳೆಹೂ ಅರಳಿಸಿ ಉದ್ಘಾಟಿಸಿದರು.

### ಶ್ರೀ ಚಂಡಿಕಾಯಾಗ ಸಂಪನ್ನ

ಬಹಳಷ್ಟು ತಯಾರಿಯೊಂದಿಗೆ ಬೆಳಿಗ್ಗೆ 7.00ಗಂಟೆಯಿಂದಲೇ ಶ್ರೀ ವಾಗೀಶ ಶಾಸ್ತ್ರಿ ಬಳಗದವರಿಂದ ಶ್ರೀ ಚಂಡಿಕಾಯಾಗದ ತಯಾರಿ ನಡೆದಿತ್ತು. ಯಾಗ ಸಂಕಲ್ಪಕ್ಕಾಗಿ ಭಕ್ತಬಾಂಧವರು ಪ್ರಾತಃಕಾಲದಲ್ಲಿ ಶ್ರೀ ಶಾರದಾ ಮಂಟಪಕ್ಕೆ ಬಂದಿದ್ದರು. ಹೊರಗೆ ಸುಂದರವಾದ ಯಾಗ ಮಂಟಪದಲ್ಲಿ ನಡೆದ ಶ್ರೀ ಚಂಡಿಕಾಯಾಗವು 10.30ಕ್ಕೆ ಪೂರ್ಣಾಹುತಿಯೊಂದಿಗೆ ಮುಕ್ತಾಯ ವಾಯಿತು. ಯಾಗ ಕರ್ತೃಗಳಾಗಿ ಶ್ರೀ ಎ. ಮೋಹನ ದೇವ್ ಮತ್ತು ಶ್ರೀಮತಿ ಉಷಾ ಮೋಹನ ದೇವ್ ದಂಪತಿಗಳು ಸಹಕರಿಸಿದರು. ದೇವಸ್ಥಾನದಲ್ಲಿ ನಡೆಯುವ ನಿತ್ಯಾನುಷ್ಠಾನ ಮಂಡಳಿಯ ಸದಸ್ಯರಿಂದ ಶ್ರೀ ಬೆಳ್ಮಣ್ ವಾಸುದೇವ ರಾವ್ ಅವರ ನೇತೃತ್ವದಲ್ಲಿ ಪಾರಾಯಣ ಹಾಗೂ ಮಹಿಳೆಯರಿಂದ ಲಲಿತಾ ಸಹಸ್ರನಾಮ ಪಠಣವು ನೆರವೇರಿತು. ಪ್ರತಿ ವರ್ಷಕ್ಕಿಂತ ಹೆಚ್ಚು ಭಕ್ತ-ಬಾಂಧವರು ಈ ವರ್ಷ ಪಾಲ್ಗೊಂಡಿದ್ದು ಯಾಗ ಪ್ರಸಾದ ಸ್ವೀಕರಿಸಿದರು.

### ವೇದಘೋಷ

ಅತಿಥಿಗಳು ಶ್ರೀ ದೇವಸ್ಥಾನ ದಲ್ಲಿ ಪ್ರಸಾದ ಸ್ವೀಕರಿಸಿ ಉದ್ಘಾಟನೆ ಮುಗಿಸಿ ವೇದಿಕೆಗೆ ಬರುವವರೆಗೆ ಶ್ರೀ ವಾಗೀಶ ಶಾಸ್ತ್ರಿ ಬಳಗದವರಿಂದ ನಡೆದ ವೇದಘೋಷವು ಎಲ್ಲರ ಗಮನ ಸೆಳೆಯಿತು.

### ಸಭಾ ಸಮಾರಂಭ

ಸಭಾ ಸಮಾರಂಭದಲ್ಲಿ ಉದ್ಘಾಟಕರಾಗಿ ಶ್ರೀ ಕೆ. ರಘುಪತಿ ಭಟ್, ಶಾಸಕರು, ಉಡುಪಿ, ಸಭಾ ಅಧ್ಯಕ್ಷರಾಗಿ ಶ್ರೀ ದಿನಕರ ಶೆಟ್ಟಿ ನಗರಸಭಾ ಅಧ್ಯಕ್ಷರು ಉಡುಪಿ, ಅತಿಥಿಗಳಾಗಿ ಶ್ರೀ ಮೋಹನ್ ಉಪಾಧ್ಯಾಯ ನಗರಸಭಾ ಸದಸ್ಯರು ಉಡುಪಿ ಅಲ್ಲದೆ ದಾನಿಗಳಾದ ಬೆಂಗಳೂರಿನ ಶ್ರೀ ರವೀಂದ್ರ ನಾಥ ಬೆಳ್ಳೆ ಹಾಗೂ ಬೆಂಗಳೂರು ನಿರ್ಮಾಣ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ಶ್ರೀ ಲಕ್ಷ್ಮೀ ನಾರಾಯಣರ ಪರವಾಗಿ ಶ್ರೀ ಶೇಷಾದ್ರಿ ಅವರು ಉಪಸ್ಥಿತರಿದ್ದರು.

(3ನೇ ಪುಟಕ್ಕೆ ...)


ಚಂಡಿಕಾಯಾಗ ಪೂರ್ಣಾಹುತಿ


ಶ್ಯಾಮರಾವ್ ಹಾಲ್ ಉದ್ಘಾಟನೆ


ಸಭಾಸಮಾರಂಭದಲ್ಲಿ ಜನಸ್ತೋಮ

ಚಿತ್ರಗಳು : ವಸಂತರಾವ್ ಕೇದಿಗೆ

ಮಕರ ಸಂಕ್ರಾಂತಿ ಮತ್ತು ಉತ್ತರಾಯಣ ಆರಂಭದ ಪುಣ್ಯ ಪರ್ವಕಾಲದ ಈ ಸಂದರ್ಭದಲ್ಲಿ ಶ್ರೀ ಶಾರದಾ ಪತ್ರಿಕೆಯ ಅಭಿಮಾನಿಗಳಿಗೆ ಮತ್ತು ಸಮಾಜ ಬಾಂಧವರಿಗೆ ಶುಭ ಹಾರೈಕೆಗಳು. –ಸಂಪಾದಕ ಮಂಡಳಿ

---

**ಯುವವೇದಿಕೆ ಮತ್ತು ಕ್ರೀಡಾವೇದಿಕೆ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ**



### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2009



ತಾ.25-01-2009ನೇ ರವಿವಾರ ಉಡುಪಿಯ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ನಡೆಯಲಿದೆ.

ಆಸಕ್ತ ತಂಡಗಳು 20-01-2009ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ದೇವದಾಸ್ ಶಾಸ್ತ್ರಿ ಆಲುಗ್ಗೇಲ್ ಹಿರಿಯಡ್ಕ (M : 9880477745), ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ (M : 9448437893), ಕೋಲ್ಪೆ ಪ್ರಕಾಶ್‌ರಾವ್ ಮಣಿಪಾಲ (M : 9448548131) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

ಅದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.

★ ಈ ವರ್ಷ (60 ವರ್ಷಕ್ಕೆ ಮೇಲ್ಪಟ್ಟು) **ಹಿರಿಯರ ಕ್ರಿಕೆಟ್ ಪಂದ್ಯಾಟ**ದ ವ್ಯವಸ್ಥೆ ಮಾಡಲಾಗಿದೆ.

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

**ಸಂಜೆ ನಡೆಯುವ ಬಹುಮಾನ ವಿತರಣಾ ಸಮಾರಂಭದಲ್ಲಿ ಮಂಗಳೂರು ಎಮ್.ಸಿ.ಎಫ್‌ನ ನಿರ್ದೇಶಕರಾದ ಶ್ರೀ ಪ್ರಭಾಕರ ರಾವ್ ಮತ್ತು ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಕೆ. ಸುಧಾಕರ ಶೆಟ್ಟಿ ಇವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.**

– ಅಧ್ಯಕ್ಷರು ಮತ್ತು ಸಂಚಾಲಕರು, ಕ್ರೀಡಾ ವೇದಿಕೆ

---

ತಾ.25-01-2009 ಬೆಳಿಗ್ಗೆ ಗಂಟೆ 9-00ರಿಂದ ಮಹಿಳಾ ವೇದಿಕೆಯ ಸಹಯೋಗದೊಂದಿಗೆ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ **ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ : 1) 1ನೇ ತರಗತಿ ಒಳಗಿನ ಮಕ್ಕಳಿಗೆ – ಚಾಕಲೇಟ್ ಹೆಕ್ಕುವುದು 2) 1ರಿಂದ 3ನೇ ತರಗತಿ ವರೆಗಿನ ಮಕ್ಕಳಿಗೆ ಎ) ಒಂಟಿ ಕಾಲಿನ ಓಟ ಬಿ) ಕೆರೆ ದಡ
3) 4ರಿಂದ 6ನೇ ತರಗತಿ ವರೆಗಿನ ಮಕ್ಕಳಿಗೆ ಎ) ಬಕೆಟಿಗೆ ರಿಂಗ್ ಎಸೆಯುವುದು ಬಿ) ಧಾನ್ಯ ಹೆಕ್ಕುವುದು 4) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ – ಎ) ಸ್ಟಿಕ್ಕರ್ ಅಂಟಿಸುವುದು ಬಿ) ತಪ್ಪಿಲ್ಲದೆ ವೇಗವಾಗಿ ಬರೆಯುವುದು
5) ಮಹಿಳೆಯರಿಗಾಗಿ – ಎ) ಮಡಕೆ ಒಡೆಯುವುದು ಬಿ) ಸಂಗೀತ ಕುರ್ಚಿ

ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಈ ಸ್ಪರ್ಧೆಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಮನುಷ್ಯನ ಸಾಧನೆಗೆ ಬಹುಮುಖ್ಯ ವಾದುದು ಆತನಲ್ಲಿರಬೇಕಾದ 'ನಾಯಕತ್ವ' ಗುಣ. ಈ ನಾಯಕತ್ವ ಗುಣವು ಎಲ್ಲ ವ್ಯಕ್ತಿಗಳಿಗೆ ಬರಲು ಸಾಧ್ಯವಿಲ್ಲ. ಯಾರು ಈ ಕೆಳಗಿನ ಗುಣಗಳನ್ನು ತನ್ನದಾಗಿಸಿಕೊಳ್ಳುತ್ತಾರೆಯೋ ಅವನು ನಾಯಕನಾಗಿ ಜಗತ್ತಿನ ಕಣ್ಣಿಗೆ ಕಾಣಲು ಸಾಧ್ಯ.

1) ಅಸೀಮ ಧೈರ್ಯ : ಯಾವುದೇ ಸಂದರ್ಭದಲ್ಲಿಯೂ ಧೈರ್ಯ ಕೆಡದೆ ನನ್ನಿಂದ ತಾಳಿಕೊಳ್ಳಲು ಸಾಧ್ಯವಿದೆ ಎಂದು ತೋರಿಸುವುದು.

2) ಆತ್ಮನಿಯಂತ್ರಣ : ತನ್ನನ್ನು ತಾನು ನಿಯಂತ್ರಿಸಿಕೊಳ್ಳಬೇಕು. ಕೆಲವೊಮ್ಮೆ ಅತಿ ಉತ್ಸಾಹ, ಕೆಲವೊಮ್ಮೆ ಉದಾಸೀನ, ಮೊದಲಾದವುಗಳು ಆತ್ಮ ನಿಯಂತ್ರಣದಿಂದ ಮಾತ್ರ ಸಾಧ್ಯ.

3) ನ್ಯಾಯಪರ ದೃಷ್ಟಿ : ತನ್ನ ವೈರಿಗೂ ಅನ್ಯಾಯವಾದಾಗ ಖಂಡಿಸುವ ಗುಣ.

4) ನಿರ್ಣಯಗಳ ಬಗ್ಗೆ ಸ್ಪಷ್ಟ ನಿಲುವು : ಯಾವುದೇ ವಿಚಾರವನ್ನು ಕೈಗೊಳ್ಳಬೇಕಾದರೆ ನಿರ್ಣಯಗಳು ಮುಖ್ಯ. ಒಮ್ಮೆ ನಿರ್ಧರಿಸಿದ ನಿರ್ಣಯವೇ ಸರಿಯಾಗಿದ್ದು; ಕೊನೆಯವರೆಗೆ ಅದಕ್ಕೆ ಪೂರಕವಾಗಿ ನಿಲ್ಲಬೇಕು.

5) ಸಮಚಿತ್ತ : ಮುಂದಾಳಾದವನು ತನ್ನ ಸಂಗಡಿಗರು ಯಾರು, ಎಷ್ಟು ಮಂದಿ ಇದ್ದರೂ ಅವರೆಲ್ಲರ ಬಗ್ಗೆ ಸಮಭಾವ ಹೊಂದಿರಬೇಕು.

6) ನಿಶ್ಚಿತ ಅವಧಿ : ತಾನು ಮಾಡಬೇಕಾದ ಕೆಲಸವನ್ನು ನಿಗದಿತ ಸಮಯದಲ್ಲಿ ಮುಗಿಸಿ ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಲು ತೊಡಗುವುದು.

7) ವ್ಯಕ್ತಿತ್ವ : ಆತನ ವ್ಯಕ್ತಿತ್ವವೂ ಸುಂದರ ಹಾಗೂ ಇತರರ ಮನಸೆಳೆಯುವಂತೆ ಇರಬೇಕು.. ಅದಕ್ಕೆ ತಕ್ಕಂತೆ ಉಡುಪನ್ನು ಧರಿಸಬೇಕು.

8) ಸಹಾನುಭೂತಿ : ತನ್ನ ಜತೆಗಾರರು ಯಾವುಧೇ ಕಷ್ಟ ತೊಂದರೆಗೆ ಸಿಲುಕಿದರೂ ಆತನ ಬಗ್ಗೆ ಸಹಾನುಭೂತಿ ಮತ್ತು ಅವರ ಬಗ್ಗೆ ಸ್ಪಷ್ಟ ಅರಿವು ಇರಬೇಕು.

9) ವೈಚಾರಿಕ ಪ್ರಭುತ್ವ : ಯಾವುದೇ ವಿಚಾರಗಳಿರಲಿ ನಾಯಕನಾಗಬೇಕಾದವನು ಆ ವಿಚಾರಗಳ ಬಗ್ಗೆ ಸಂಪೂರ್ಣ ತಿಳಿದು ಕೊಂಡಿರಬೇಕು.

10) ಜವಾಬ್ದಾರಿತನ : ಯಾವುದೇ ಪ್ರಾಮುಖ್ಯ ಜವಾಬ್ದಾರಿಗಳನ್ನು ಕೊಟ್ಟರೂ ನಿರ್ವಹಿಸಲು ಯೋಗ್ಯನಾಗಿರಬೇಕು.

11) ಕೂಡಿಬಾಳುವ ಗುಣ : ತನ್ನ ಸಂಗಡಿಗರ ಸಹಕಾರವನ್ನು ಪಡೆಯಲು ಸಾಧ್ಯವಿದ್ದವನೇ ನಾಯಕ.

12) ಮುನ್ನುಗ್ಗುವ ಗುಣ : ಎಲ್ಲ ಸಂದರ್ಭದಲ್ಲಿಯೂ ಸಂಗಡಿಗರ ಮಾತನ್ನು ಲೆಕ್ಕಕ್ಕೆ ತಾರದೆ ಮುನ್ನುಗ್ಗುತ್ತಾ ಆ ಕೆಲಸಗಳನ್ನು ಪೂರೈಸುವ ಛಲ.

ಇವೇ ಮೊದಲಾದ ಗುಣಗಳನ್ನು ಹೊಂದಿದ ವ್ಯಕ್ತಿಯು ಪ್ರಪಂಚದಲ್ಲಿ ನಾಯಕನಾಗಲು ಅರ್ಹನಿರುತ್ತಾನೆ. ಈ ಗುಣಗಳನ್ನು ನಾವು ಇಂದಿನಿಂದ ಈಗಿನಿಂದಲೇ ಕಲಿತುಕೊಳ್ಳೋಣ.

# ವೇದವೇದಾಂಗಗಳೆಂದರೇನು?

**-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು**

(ಹಿಂದಿನ ಸಂಚಿಕೆಯಿಂದ....)

**ವೇದಾಂಗಗಳು**

ವೇದ + ಅಂಗ = ವೇದಾಂಗ. ವೇದಗಳ ಅರ್ಥಗಳನ್ನು ತಿಳಿಯಲು ವೇದೋಕ್ತ ಅನುಷ್ಠಾನಗಳ ಪ್ರಯೋಗಗಳನ್ನು ಅರ್ಥವತ್ತಾಗಿ ನೆರವೇರಿಸಲು ಸಹಾಯಕವಾದ ಶಾಸ್ತ್ರಗಳೇ ವೇದಾಂಗಗಳು. 'ಅಂಗ್ಯಂತೇಜ್ಞಾಯಂತೇ ಏಭಿರಿತಿ ಅಂಗಾನಿ' ಇವುಗಳಿಂದ (ಅರ್ಥಗಳು, ಪ್ರಯೋಗ ವಿಧಾನಗಳು) ತಿಳಿಯುವುದರಿಂದ ಇವುಗಳು ಅಂಗಗಳು ಎಂಬುದು ವ್ಯುತ್ಪತ್ತಿ.

ವೇದಾಂಗಗಳು ಆರು. ಅವುಗಳೇ 1) ಶಿಕ್ಷಾ 2) ವ್ಯಾಕರಣ 3) ಛಂದಸ್ಸು 4) ನಿರುಕ್ತ 5) ಜ್ಯೌತಿಷ 6) ಕಲ್ಪ. ಇದಕ್ಕೆ 'ಷಡಂಗೋವೇದಃ' ಎನ್ನುವುದು.

**ಶಿಕ್ಷಾ**

ಶಿಕ್ಷಾ ಎನ್ನವುದರ ಅರ್ಥವನ್ನು ಮತ್ತದರ ಪ್ರಯೋಜನವನ್ನು ವೇದಭಾಷ್ಯಕಾರರಿಂದ ಸಾಯಣಾಚಾರ್ಯರು ಹೀಗೆನ್ನುತ್ತಾರೆ. 'ಸ್ವರವರ್ಣಾದ್ಯುಚ್ಚಾರಣ ಪ್ರಕಾರೋ ಯತ್ರಶಿಕ್ಷ್ಯತೇ ಉಪದಿಶ್ಯತೇ ಸಾ ಶಿಕ್ಷಾ" ಶಿಕ್ಷೆ ಎಂದರೆ ಉಪದೇಶ ಯಾವುದರ ಉಪದೇಶ? ವೇದಗಳ ಸ್ವರ, ವರ್ಣಾದಿಗಳ ಉಚ್ಚಾರಣೆಯ ಕ್ರಮದ ಉಪದೇಶ. ಆದುದರಿಂದ ಇದು ಶಿಕ್ಷಾ. ಉಚ್ಚಾರಣೆಯ ಕ್ರಮವನ್ನು ಪುಸ್ತಕವನ್ನೋದಿ ತಿಳಿಯಲು ಸಾಧ್ಯವಿಲ್ಲ. ಅದನ್ನು ಗುರುಮುಖದಿಂದಲೇ ಕಲಿಯಬೇಕಾಗುತ್ತದೆ. ಸ್ವರ (ಉದಾತ್ತ, ಅನುದಾತ್ತ, ಸ್ವರಿತ) ವ್ಯತ್ಯಾಸವಾದರೆ ಅರ್ಥವ್ಯತ್ಯಾಸವಾಗಿ ಬಿಡುತ್ತದೆ. ಇದಕ್ಕೊಂದು ಕಥೆಯನ್ನು ಹೇಳುತ್ತಾರೆ. ತ್ವಷ್ಟ್ರುವಿನ ಮಗನಾದ ವಿಶ್ವರೂಪಾಚಾರ್ಯನನ್ನು ಇಂದ್ರನು ಕೊಂದುದರ ಸೇಡು ತೀರಿಸಿಕೊಳ್ಳಲು ತ್ವಷ್ಟ್ರುವು ಇಂದ್ರನ ಶತ್ರುವನ್ನು (ಕೊಲೆಗಾರನನ್ನು) ಸೃಷ್ಟಿಸಬೇಕೆಂದು ಒಂದು ಯಜ್ಞವನ್ನು ನೆರವೇರಿಸುತ್ತಾನೆ. ಆಗ ಹೇಳಿದ ಮಂತ್ರದಲ್ಲಿ ಸ್ವರತಪ್ಪಿತು. ಮಂತ್ರದ ಅಂತ್ಯದಲ್ಲಿ ಉದಾತ್ತಸ್ವರವಿರಬೇಕಾಗಿತ್ತು. ಆಗ ಅದು ಷಷ್ಠೀ ತತ್ಪುರುಷವಾಗಿ 'ಇಂದ್ರನ ಶತ್ರು' ಎಂಬರ್ಥ ಬರುತ್ತಿತ್ತು. ಆದರೆ ಅವನು ಆದಿಯಲ್ಲೇ ಉದಾತ್ತವನ್ನು ಉಚ್ಚರಿಸಿದ್ದರಿಂದ ಅದು ಬಹುವ್ರೀಹಿಯಾಯಿತು. ಇದರಿಂದ 'ಇಂದ್ರನೇ ಶತ್ರುವಾಗಿರುವವನು' ಎಂಬರ್ಥ ಬಂತು. ಇದರಿಂದ ಯಜ್ಞದಲ್ಲಿ ಹುಟ್ಟಿಬಂದ ವೃತ್ರನನ್ನು ಇಂದ್ರನೇ ಕೊಲ್ಲುವಂತಾಯಿತು. ಅದಕ್ಕೇ ಹೇಳುವುದು ವೇದಮಂತ್ರಗಳನ್ನು ಸ್ವರತಪ್ಪದೇ ಉಚ್ಚರಿಸಬೇಕೆಂದು.

ಶಿಕ್ಷೆಗೆ ಆರು ಅಂಶಗಳಿವೆ – 1) ವರ್ಣ 2) ಸ್ವರ 3) ಮಾತ್ರಾ 4) ಬಲ 5) ಸಾಮ 6) ಸಂತಾನ

ವರ್ಣ – ಅಕ್ಷರ, ಸಂಸ್ಕೃತ ವರ್ಣಗಳ ಪರಿಚಯವಿರಬೇಕಾಗುತ್ತದೆ.

ಸ್ವರ – ಉದಾತ್ತ, ಅನುದಾತ್ತ, ಸ್ವರಿತ.

ಮಾತ್ರಾ – ವರ್ಣೋಚ್ಚಾರಣೆಯ ಕಾಲ. ಹ್ರಸ್ವ, ದೀರ್ಘ, ಪ್ಲುತವೆಂದು ಮೂರು ವಿಧ.

ಬಲ – ವರ್ಣೋಚ್ಚಾರಣೆಯ ಸ್ಥಾನ, ಪ್ರಯತ್ನಗಳನ್ನೇ ಬಲವೆನ್ನುವುದು. ಇದು ಬಾಹ್ಯ ಮತ್ತು ಆಭ್ಯಂತರವೆಂದು ಎರಡು ಬಗೆ. ಬಾಹ್ಯವು – ವಿವಾರ, ಸಂವಾರ, ಶ್ವಾಸ, ನಾದ, ಘೋಷ, ಅಘೋಷ, ಅಲ್ಪಪ್ರಾಣ, ಮಹಾಪ್ರಾಣ, ಉದಾತ್ತ, ಅನುದಾತ್ತ, ಸ್ವರಿತವೆಂದು ೧೧ ವಿಧ

ಆಭ್ಯಂತರ – ಸ್ಪೃಷ್ಟ, ಈಷತ್‌ಸ್ಪೃಷ್ಟ, ವಿವೃತ, ಸಂವೃತವೆಂದು ೪ ಪ್ರಕಾರ. ಸಾಮ–ಉಚ್ಚಾರಣೆ ಸ್ಪಷ್ಟವಾಗಿದ್ದು, ಮಾಧುರ್ಯಾದಿಗುಣಗಳಿಂದ ಕೂಡಿರುವುದು.

ಸಂತಾನ – ಸಂಹಿತೆಯೆಂದೂ ಇದಕ್ಕೆ ಇನ್ನೊಂದು ಹೆಸರು. ಸಂಧಿನಿಯ ಮಗಳನ್ನು ಇದು ತಿಳಿಸಿಕೊಡುತ್ತದೆ. ಪ್ರಾತಿಶಾಖ್ಯಗಳೆಂಬ ಗ್ರಂಥಗಳು ಇವುಗಳನ್ನು ವಿವೇಚಿಸುತ್ತವೆ. ಬೇರೆ ಬೇರೆ ವೇದಕ್ಕೆ ಬೇರೆ ಬೇರೆ ಪ್ರಾತಿಶಾಖ್ಯಗಳಿರುತ್ತವೆ. ವೇದಸಂಹಿತೆಯ ಪ್ರತಿಶಾಖೆಗೂ ಒಂದೊಂದು ಪ್ರಾತಿಶಾಖ್ಯವಿರುತ್ತದೆ.

ಋಗ್ವೇದಕ್ಕೆ ಋಕ್‌ಪ್ರಾತಿಶಾಖ್ಯ, ಕೃಷ್ಣಯಜುರ್ವೇದಕ್ಕೆ ತೈತ್ತೀರಿಯ ಪ್ರಾತಿಶಾಖ್ಯ, ಶುಕ್ಲಯಜುರ್ವೇದಕ್ಕೆ ವಾಜಸನೇಯೀ ಪ್ರಾತಿಶಾಖ್ಯ, ಸಾಮವೇದಕ್ಕೆ ಪುಷ್ಪಸೂತ್ರ ಮತ್ತು ಋಕ್‌ತಂತ್ರ.

ಸುಮಾರು 30ಕ್ಕೂ ಹೆಚ್ಚು ಶಿಕ್ಷಾಗ್ರಂಥಗಳಿರುವುದಾಗಿ ತಿಳಿದು ಬಂದಿದೆ.

**ವ್ಯಾಕರಣ**

ಭಾಷೆಗೊಂದು ನಿಯಮವಿದ್ದರೆ ಮಾತ್ರ ಅದು ಎಲ್ಲರಿಗೂ ಅರ್ಥವಾಗಲು ಸಾಧ್ಯ. ನಿಯಮವಿಲ್ಲದ ಭಾಷೆ ಗೊಂದಲವನ್ನುಂಟು ಮಾಡುವ ಧ್ವನಿಯಾದೀತು. ಭಾಷೆಯೊಂದು ಸಂವಹನ ಮಾಧ್ಯಮ. ಅದರ ನಿಯಮಗಳನ್ನು ನಿರೂಪಿಸುವುದು, ವಿವೇಚಿಸುವುದು ವ್ಯಾಕರಣದ ಕೆಲಸ. ಭಾಷೆಗೆ ವ್ಯಾಕರಣ ಸಹಜವಾದರೂ ಅದಕ್ಕೊಂದು ಶಾಸ್ತ್ರೀಯ ಚೌಕಟ್ಟು ಬಂದದ್ದು ಅನಂತರವೇ. ಪದಕ್ಕೊಂದು ಪ್ರಕೃತಿ, ಅದಕ್ಕೆ ಪ್ರತ್ಯಯಗಳು ಇರುವುದನ್ನು ವಿಶ್ಲೇಷಿಸಿದ್ದು ಶಾಸ್ತ್ರೀಯ ವ್ಯಾಕರಣವೇ.

ವೇದರಕ್ಷಣೆಗೂ ವ್ಯಾಕರಣದ ಕೊಡುಗೆ ಅನನ್ಯ. ಆದುದರಿಂದಲೇ ಅದಕ್ಕೂ ವೇದಾಂಗತ್ವ, ವೇದಗಳಲ್ಲಿ ಬರುವ ಪದಗಳನ್ನು ಅರ್ಥೈಸಿಕೊಳ್ಳಲು ವ್ಯಾಕರಣ ಸಹಾಯಕವಾಗಿದೆ. ವರರುಚಿ ಹೇಳಿದ ಐದು ಪ್ರಯೋಜನಗಳು ವ್ಯಾಕರಣದಿಂದಲೇ ಲಭ್ಯ. ಅವುಗಳು 1) ರಕ್ಷಾ 2) ಊಹ 3) ಆಗಮ 4) ಲಘು 5) ಅಸಂದೇಹ

ವ್ಯಾಕರಣದಿಂದ ಭಾಷೆ ತಲೆಮಾರುಗಳಿಂದ ತಲೆಮಾರುಗಳವರೆಗೆ ರಕ್ಷಿಸಲ್ಪಡುತ್ತದೆ. ವಿಭಿನ್ನಲಿಂಗ, ವಿಭಕ್ತಿಗಳನ್ನು ಯಥಾಸಂದರ್ಭ ಊಹಿಸುವುದು ವ್ಯಾಕರಣದ ಸಹಾಯದಿಂದಲೇ. ಶಾಸ್ತ್ರಜ್ಞಾನ (ಆಗಮ)ವೂ ವ್ಯಾಕರಣದಿಂದ ಉಂಟಾಗುತ್ತದೆ. ಪ್ರಕೃತಿಪ್ರತ್ಯಯಗಳ ಅರಿವು ಸುಲಭ (ಲಘು)ವಾಗಿ ವ್ಯಾಕರಣದಿಂದ ಬರುತ್ತದೆ. ವ್ಯಾಕರಣವನ್ನು ಆಳವಾಗಿ ಅಧ್ಯಯನ ಮಾಡಿದರೆ ಪ್ರಯೋಗದಲ್ಲಿ ಸಂದೇಹಕ್ಕೆ ಎಡೆಯಿರುವುದಿಲ್ಲ.

ವ್ಯಾಕರಣ ಅಪಾರವ್ಯಾಪ್ತಿಯುಳ್ಳದ್ದು. ಹಿಂದೆ ಬೃಹಸ್ಪತಿಯು ಇಂದ್ರನಿಗೆ ಸಾವಿರವರ್ಷ ವ್ಯಾಕರಣವನ್ನು ಹೇಳಿಕೊಟ್ಟರೂ ಅದರ ಕೊನೆಮುಟ್ಟಲಾಗಲಿಲ್ಲವಂತೆ.

ಹಿಂದೆ ಅನೇಕ ವ್ಯಾಕರಣಗಳಿದ್ದವು. ಐಂದ್ರ ವ್ಯಾಕರಣವೆಂಬುವುದೊಂದು ಪಾಣಿನಿಯ ಅಷ್ಟಾಧ್ಯಾಯಿಗಿಂತಲೂ ಪ್ರಾಚೀನವಾದ ವ್ಯಾಕರಣವಿತ್ತು. ವೈಯಾಕರಣರು ಅನೇಕರಿದ್ದರು. ಸದ್ಯ ಅವರ ಉಲ್ಲೇಖಗಳು ಮಾತ್ರ ದೊರೆಯುತ್ತವೆ. ಪಾಣಿನಿ ಕ್ರಿ.ಪೂ. 4ನೆಯ ಶತಮಾನಕ್ಕೆ ಹಿಂದೆ ಇದ್ದವನು. ಇವನು ಅಷ್ಟಾಧ್ಯಾಯಿ ಎಂಬ ವ್ಯಾಕರಣ ಸರ್ವಾಂಗ ಸುಂದರವಾದುದು. ಹಾಗೇ ವೈಜ್ಞಾನಿಕವಾದುದು. ಇದರಲ್ಲಿ ವೇದಗಳ ಸ್ವರಪ್ರಕ್ರಿಯೆಯನ್ನೂ ವಿವರಿಸಲಾಗಿದೆ.

(6ನೇ ಪುಟಕ್ಕೆ....)

# ಬಿ.ವಿ. ರಾವ್ ಅವರಿಗೆ ಸನ್ಮಾನ

ಬೆಂಗಳೂರು ವಿಜಯನಗರದಲ್ಲಿ ವಾಸ್ತವ್ಯವಿರುವ ಶ್ರೀ ಬಿ. ವಿ. ರಾವ್ ಅವರು ಬರೆದ 'ಹೂಗೊಂಚಲು' ಕೃತಿಯನ್ನು ತಾ.23–12–2008ರಂದು ಬೆಂಗಳೂರು ಚಾಮರಾಜ ಪೇಟೆಯ ಕಾವೇರಿ ಮಾತಾ ಸಂಗೀತ, ನೃತ್ಯ ಶಾಲೆಯ ವತಿಯಿಂದ ನಯನ ಕನ್ನಡ ಭವನದಲ್ಲಿ ಬಿಡುಗಡೆಗೊಳಿಸಿದರು. ಈ ಯಶಸ್ವೀ ಕೃತಿಗಾಗಿ ಶ್ರೀ ಬಿ.ವಿ. ರಾವ್ ಅವರನ್ನು ಶಾಲು, ಸ್ಮರಣಿಕೆಗಳೊಂದಿಗೆ ಸನ್ಮಾನಿಸಲಾಯಿತು. ಪುಸ್ತಕದಲ್ಲಿರುವ ಕೆಲವು ಹಾಡುಗಳಿಗೆ ಸಂಗೀತ ಶಾಲೆಯ ವಿದ್ಯಾರ್ಥಿಗಳು ರಾಗಸಂಯೋಜಿಸಿ ಮಧುರವಾಗಿ ಹಾಡಿದರು.

## ಹೊಸ ಬೆಳಕು

**ನಲ್ನುಡಿ :**

ದೇವಸ್ಯ ಪಶ್ಯ ಕಾವ್ಯಂ
ನಮಮಾರ ನಜೀರ್ಯತಿ

ಅಂದರೆ ದೇವರ ಕಾವ್ಯ ಓದು, ಅದಕ್ಕೆ ಮರಣವಿಲ್ಲ ಜೀರ್ಣವಿಲ್ಲ.

**ಪುಸ್ತಕ ಪರಿಚಯ :**

**ನಾಯಿ ಕಚ್ಚಿತೇ? ರೇಬಿಸ್ – ಒಂದು ಕೈಪಿಡಿ.**
**ಲೇಖಕರು : ಡಾ। ವೈ. ಸುದರ್ಶನ ರಾವ್,**
ಎಂ.ಬಿ.ಬಿ.ಎಸ್;ಎಂ.ಎಸ್.

ನಾಯಿಯಿದೆ ಎಚ್ಚರಿಕೆ! ಕೆಲವು ಮನೆಗಳ ಮುಂದೆ ಈ ರೀತಿ ಬರಹದ ಫಲಕವಿರುತ್ತದೆ. ಈ ಮನೆಗಳ ಅಂಗಳವನ್ನು ದಾಟಬೇಕಾದರೆ ನಾಯಿಯ ಇರುವಿಕೆಯ ಬಗ್ಗೆ ಜಾಗ್ರತೆವಹಿಸಿಯೇ ಕಾಲಿಡಬೇಕು. ಕೆಲವು ಬೀದಿಗಳಲ್ಲಂತೂ ನಾಯಿಗಳ ಕಾಟ ಜಾಸ್ತಿ. ಮಕ್ಕಳಿಗೆ ಕಚ್ಚಿಕಚ್ಚಿ ಸಾವಿಗೆ ಕಾರಣವಾದುದನ್ನೂ ಕೇಳಿದ್ದೇವೆ. ಮನುಷ್ಯ ನಾಯಿಗೆ ಕಚ್ಚಿದರೆ ಅದು ಸುದ್ದಿ ಎಂದು ಹೇಳುವ ಕಾಲವಿತ್ತು. ಆದರೆ ಈಗ ನಾಯಿ ಕಚ್ಚಿದರೇ ಸುದ್ದಿ. ನಾಯಿ ಕಚ್ಚಿದರೆ ಭಯಂಕರ ಅಪಾಯ ಖಂಡಿತ. ಆದ್ದರಿಂದ ಡಾ। ವೈ. ಸುದರ್ಶನ ರಾವ್ ಇವರು 'ನಾಯಿ ಕಚ್ಚಿತೇ?' ರೇಬಿಸ್ – ಒಂದು ಕೈಪಿಡಿ ಎಂಬ ಒಂದು ಅಮೂಲ್ಯ ಪುಸ್ತಕವನ್ನು ಬರೆದು ಪ್ರಕಟಿಸಿ ಜನಸಮುದಾಯಕ್ಕೆ ಅರ್ಪಿಸಿದುದು ಸ್ವಾಗತಾರ್ಹವಾಗಿದೆ.

ಡಾ। ವೈ. ಸುದರ್ಶನ ರಾವ್ ಮುನ್ನುಡಿಯಲ್ಲಿ ತಿಳಿಸಿರುವಂತೆ – "ನನ್ನ ತಂದೆಯವರಾದ ಡಾ। ವೈ. ಚಂದ್ರಶೇಖರ ರಾವ್‌ರವರು ನಿಧನವಾಗುವುದಕ್ಕೆ ಕೆಲವೇ ದಿನಗಳ ಮೊದಲು ಇದರ ಹಸ್ತಪ್ರತಿಯನ್ನು ಓದಿ ಕೆಲವು ಮಾರ್ಪಾಡುಗಳನ್ನು ಹಾಗೂ ಕೆಲವು ಸೇರ್ಪಡೆಗಳನ್ನು ಸೂಚಿಸಿದ್ದರು. ಅದನ್ನು ಹಾಗೆಯೇ ಈ ಪುಸ್ತಕದಲ್ಲಿ ಅಳವಡಿಸಿದ್ದೇನೆ. ಈ ಕೈಪಿಡಿ ಹೊರಬರುವ ಹೊತ್ತಿಗೆ ಅವರಿಲ್ಲವಾದರೂ ಅವರು ನೀಡಿದ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಕೈಪಿಡಿಗೆ ತಿದ್ದುಪಡಿಗಳನ್ನು ನಿರ್ದೇಶಿಸಿ ಸಹಕರಿಸಿದ ಬ್ರಹ್ಮಾವರದ ಎಸ್.ಎಂ.ಎಸ್. ಕಾಲೇಜಿನ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಡಾ। ವೈ. ರವೀಂದ್ರನಾಥ ರಾವ್‌ರಿಗೂ ಮತ್ತು ಅವರ ಅನುಜರಾದ ಶ್ರೀ ಅವನೀಂದ್ರನಾಥ ರಾವ್‌ರಿಗೂ ಹಾಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಮುದ್ರಕರಿಗೂ ಧನ್ಯವಾದಗಳು."

ಈ ಪುಸ್ತಕದಲ್ಲಿ ರೇಬಿಸ್ – ಕೆಲವು ಪ್ರಾಥಮಿಕ ತಿಳುವಳಿಕೆಗಳು, ರೇಬಿಸ್ ರೋಗದ ಚಿಹ್ನೆಗಳು, ನಾಯಿ ಕಚ್ಚಿದ ಕೂಡಲೇ ಮಾಡಬೇಕಾದ ಚಿಕಿತ್ಸೆ, ರೇಬಿಸ್ ರೋಗದ ಚಿಕಿತ್ಸೆ, ಸಂದೇಹಗಳು ಮತ್ತು ಉತ್ತರಗಳು ಎಂಬ ಲೇಖನಗಳಿವೆ. ಕೆಲವು ಸಂದೇಹಗಳು ಮತ್ತು ಉತ್ತರಗಳು:

*ಯಾವ ಯಾವ ಪ್ರಾಣಿಯ ಕಡಿತದಿಂದ ರೇಬಿಸ್ ಖಾಯಿಲೆ ಬರಬಹುದು?

– ನಾಯಿ, ಇಲಿ, ಬೆಕ್ಕು, ಮುಂಗುಸಿ, ರೇಬಿಸ್ ಖಾಯಿಲೆ ಇರುವ ಯಾವುದೇ ಪ್ರಾಣಿ, ಕಾಡು ಪ್ರಾಣಿ, ಮಂಗ, ಕುದುರೆ, ಹಂದಿ ಇತ್ಯಾದಿ.

*ರೇಬಿಸ್ ಪೀಡಿತ ದನದ ಹಾಲು ಕುಡಿದರೆ ರೇಬಿಸ್ ಖಾಯಿಲೆ ಬರಬಹುದೇ?

– ಹೌದು. ಆದರೆ ಹಾಲನ್ನು ಕುದಿಸಿ ಕುಡಿದರೆ ಈ ಖಾಯಿಲೆ ಬರುವುದಿಲ್ಲ.

ಡಾ। ವೈ. ಚಂದ್ರಶೇಖರ ರಾವ್ ಅವರು 'ರೇಬಿಸ್ – ಇದು ನಿಮಗೆ ಗೊತ್ತಿರಲಿ' ಲೇಖನದಲ್ಲಿ ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆ.

ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕಳೆದ ವರ್ಷ 'ಗ್ರಾಮವೈದ್ಯ' ಎಂಬ ಆಯುರ್ವೇದ ಗ್ರಂಥವನ್ನು ಮುದ್ರಿಸಿ ಆಸಕ್ತರಿಗೆ ಉಚಿತವಾಗಿ ಒದಗಿಸಲಾಯಿತು. ಈ ವರ್ಷ 'ನಾಯಿಕಚ್ಚಿತೇ? – ರೇಬಿಸ್ – ಒಂದು ಕೈಪಿಡಿ'ಯನ್ನು ಆಸಕ್ತರಿಗೆ ಉಚಿತವಾಗಿ ನೀಡಲಾಗುವುದು ಎಂದು ತಿಳಿಸಿರುತ್ತಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

## ಧಾರ್ಮಿಕ ಅಂಧಶ್ರದ್ಧೆ ಬಿಟ್ಟಲ್ಲಿ ಸಮಾಜವು ಸುಸಂಸ್ಕೃತ : ಶಾಸಕ ಕೆ. ರಘುಪತಿಭಟ್

(...1ನೇ ಪುಟದಿಂದ)

ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾಯರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ವೇಣುಗೋಪಾಲರಾವ್ ಧನ್ಯವಾದ ಅರ್ಪಿಸಿದರು. ಡಾ| ವೈ. ರವೀಂದ್ರನಾಥರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದರು.

**ಸ್ವಾಗತ ಗೋಪುರ**

ಶ್ರೀ ಶಾರದಾ ದೇವಸ್ಥಾನದ ಮುಂಭಾಗದಲ್ಲಿ ಸುಂದರ ಸ್ವಾಗತ ಗೋಪುರವು ನಿರ್ಮಾಣವಾಗಿದ್ದು ಈ ಗೋಪುರ ನಿರ್ಮಾಣಕ್ಕಾಗಿ ಬೆಂಗಳೂರಿನ ನಿರ್ಮಾಣ್ ಸಮೂಹ ಸಂಸ್ಥೆಗಳ ಸ್ಥಾಪಕರಾದ ಶ್ರೀ ಲಕ್ಷ್ಮೀನಾರಾಯಣ ಅವರು ಒಂದು ಲಕ್ಷ ರೂಪಾಯಿ ಕೊಡುಗೆ ನೀಡಿದ್ದಾರೆ. ಈ ಗೋಪುರ ನಿರ್ಮಾಣದಿಂದ ಶ್ರೀ ಶಾರದಾ ದೇವಸ್ಥಾನದ ಸಂಕೀರ್ಣಕ್ಕೆ ಮತ್ತಷ್ಟು ಶೋಭೆ ಹೆಚ್ಚಿದೆ.

**ಶ್ಯಾಮರಾವ್ ಸಭಾಂಗಣ**

ದಿ| ಅಲೆವೂರು ಶ್ಯಾಮರಾವ್ ಅವರ ಹೆಸರಿನಲ್ಲಿದ್ದ ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣವು ನವೀಕರಣಗೊಂಡಿದೆ. ಸಭಾಂಗಣದ ಇಕ್ಕೆಲಗಳಲ್ಲಿ ಹಾಗೂ ಪೂರ್ವಭಾಗದಲ್ಲಿ ಬಾಲ್ಕನಿಯನ್ನು ನಿರ್ಮಿಸಲಾಗಿದೆ. ಇದರಿಂದ ಸಭಾಂಗಣಕ್ಕೆ ಗಾಳಿ ಬೆಳಕು ಚೆನ್ನಾಗಿ ಸಿಗುವುದಲ್ಲದೆ ಸುಮಾರು 390ಕ್ಕೂ ಹೆಚ್ಚು ಜನರಿಗೆ ಕುಳಿತುಕೊಳ್ಳುವ ಸ್ಥಳಾವಕಾಶ ಒದಗಿದೆ. ಇದೀಗ ಈ ನವೀಕರಣ ಕಾರ್ಯಕ್ಕೆ ಶ್ರೀ ರವೀಂದ್ರನಾಥ ಬೆಳ್ಳೆ ದಂಪತಿಗಳು 5 ಲಕ್ಷ ರೂಪಾಯಿ ನೀಡಿ ಸಹಕರಿಸಿದ್ದಾರೆ.

**ಗೋಪಣ್ಣಯ್ಯ – ಗಂಗಮ್ಮ ಸಭಾಂಗಣ**

ಶಾರದಾ ಮಂಟಪದ ಪೂರ್ವಭಾಗದ 2ನೇ ಮಹಡಿಯಲ್ಲಿ ಅತಿಥಿಗೃಹವನ್ನು ಸುಸಜ್ಜಿತವಾಗಿ ನಿರ್ಮಿಸಲಾಗಿದೆ. ಈ ಸಭಾಂಗಣಕ್ಕೆ ಗೋಪಣ್ಣಯ್ಯ–ಗಂಗಮ್ಮ ಟ್ರಸ್ಟ್‌ವತಿಯಿಂದ 50,000ರೂ.ಗಳ ದಾನವನ್ನು ಸ್ವೀಕರಿಸಲಾಗಿದೆ.

ಇದರಲ್ಲಿ ಸುಮಾರು 100 ಮಂದಿ ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದ್ದು ಸಣ್ಣ ಸಮಾರಂಭಗಳಿಗೆ ಉಪಯುಕ್ತವಾಗಿದೆ.

**'ಇಂಟರ್ ಲಾಕ್' ಅಳವಡಿಕೆ**

ಶ್ರೀ ಶಾರದಾ ದೇವಸ್ಥಾನದ ಮುಂಭಾಗದಲ್ಲಿ ಪೂರ್ಣವಾಗಿ 'ಇಂಟರ್‌ಲಾಕ್' ಅಳವಡಿಸಲಾಗಿದೆ. ಶ್ರೀ ದೇವಸ್ಥಾನಕ್ಕೆ ಬರುವ ಭಕ್ತರ ಬೇಡಿಕೆಯಂತೆ ಈ 'ಇಂಟರ್‌ಲಾಕ್' ಅಳವಡಿಕೆಯಿಂದ ದೇವಸ್ಥಾನದ ಸ್ವಚ್ಛತೆ ವತಾರದ ಶುಚಿತ್ವ ಇನ್ನೂ ಹೆಚ್ಚಿದೆ. ಅಲ್ಲದೆ ಇಡೀ ಸಂಕೀರ್ಣದ ಅಂದ ಇನ್ನಷ್ಟು ಹೆಚ್ಚಿದೆ.

**ಸನ್ಮಾನ ಸಮಾರಂಭ**

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ನಡೆದ ಶ್ರೀ ಶಾರದಾ ಮಂಟಪ ಸಂಕೀರ್ಣದ ನವೀಕರಣ ಕಾರ್ಯಕ್ಕೆ ದಾನಿಗಳಿಂದ ಆರ್ಥಿಕ ಸಹಕಾರವನ್ನು ಸಂಗ್ರಹಿಸಿದಂತೆ ಕಾಮಗಾರಿಗಳಿಗೆ ಅತ್ಯಂತ ದೊಡ್ಡ ಮೊತ್ತಗಳನ್ನು ನೀಡಿದ ದಾನಿಗಳಾದ ಬೆಂಗಳೂರಿನ ಶ್ರೀ ರವೀಂದ್ರನಾಥ ಬೆಳ್ಳೆ, ಬೆಂಗಳೂರಿನ ಸಮೂಹ ಸಂಸ್ಥೆಗಳ ಸ್ಥಾಪಕರಾದ ಶ್ರೀ ಲಕ್ಷ್ಮೀನಾರಾಯಣರ ಅನುಪಸ್ಥಿತಿಯಲ್ಲಿ ಅವರ ಪ್ರತಿನಿಧಿ ಶ್ರೀ ಶೇಷಾದ್ರಿ, ಗೋಪಣ್ಣಯ್ಯ–ಗಂಗಮ್ಮ ಟ್ರಸ್ಟ್‌ನ ಶ್ರೀಮತಿ ಸುನಂದ ಸಿ.ಎಸ್. ರಾವ್ ಇವರುಗಳನ್ನು ಶಾಲು, ಗಂಧದ ಹಾರ ಫಲಪುಷ್ಪ, ಗಂಧದ ಶಾರದೆಯ ಮೂರ್ತಿ ಸಹಿತ ಮಂಟಪವನ್ನು ನೀಡಿ ಸನ್ಮಾನಿಸಲಾಯಿತು.

**ಸ್ಮರಣಿಕೆ ನೀಡಿಕೆ**

ಆಗಮಿಸಿದ ಅತಿಥಿಗಳೆಲ್ಲರಿಗೆ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ನೆನಪಿನ ಕಾಣಿಕೆಯಾಗಿ ಬೆಳ್ಳಿಯ ಮತ್ತು ಗಂಧದ ಶಾರದೆಯ ಮೂರ್ತಿಗಳನ್ನು ನೀಡಿ ಗೌರವಿಸಲಾಯಿತು.

ಕಳೆದ 2 ತಿಂಗಳ ಹಿಂದೆಯೇ ಸಮರಂಭಕ್ಕೆ ಕರ್ನಾಟಕ ರಾಜ್ಯದ ಗೃಹಸಚಿವ ಡಾ| ವಿ.ಎಸ್. ಆಚಾರ್ಯರನ್ನು ಆಹ್ವಾನಿಸಿದ್ದು ಶ್ರೀಯುತರು ಖಂಡಿತಾ ಬರುತ್ತೇನೆಂದು ತಿಳಿಸಿ ತಮ್ಮ ಡೈರಿಯಲ್ಲಿ ಬರೆದುಕೊಂಡಿದ್ದರು. ಆಮಂತ್ರಣ ಪತ್ರಿಕೆಯಲ್ಲಿ ಶ್ರೀಯುತರ ಹೆಸರನ್ನು ಮುದ್ರಿಸಿ ಆಮಂತ್ರಣ ಪತ್ರಿಕೆಯನ್ನು ನೀಡಲು ಹೋದಾಗಲೂ ಖಂಡಿತಾ ಇದ್ದೇನೆ, ಬರುತ್ತೇನೆ ಎಂದು ಭರವಸೆ ನೀಡಿದ್ದರು. ಅದರೆ ಸಮಾರಂಭದ ಸಂದರ್ಭದಲ್ಲಿಯೇ ರಾಜ್ಯದ ಮುಖ್ಯಮಂತ್ರಿಗಳ ವಿದೇಶ ಪ್ರವಾಸವಿದ್ದು ನಮ್ಮ ಸಚಿವರು ಬೆಂಗಳೂರಿನಲ್ಲಿಯೇ ಉಪಸ್ಥಿತರಿರಬೇಕಾದ ಹೊಣೆಗಾರಿಕೆ ಇದ್ದುದರಿಂದ ಸಮಾರಂಭದಲ್ಲಿ ಗೈರುಹಾಜರಾಗಿದ್ದು ಸಮಾರಂಭಕ್ಕೆ ಶುಭಕೋರಿ ಸಂದೇಶಗಳನ್ನು ಕಳುಹಿಸಿದ್ದಾರೆ.

ನಮ್ಮ ಶ್ರೀ ಶಾರದಾ ಮಂಟಪದ ಹಾಗೂ ಉಡುಪಿಯ ಖ್ಯಾತ ಇಂಜಿನಿಯರ್ ಶ್ರೀ ಕೆ. ರಾಘವೇಂದ್ರ ರಾಯರು ತಮ್ಮ ಮನೆಯ ಕಾರ್ಯಕ್ರಮವಿದ್ದುದರಿಂದ ಸನ್ಮಾನ ಸ್ವೀಕರಿಸಲು ಗೈರು ಹಾಜರಾಗಿದ್ದರು.

**ಶಾರದಾ ನಗರ ಪ್ರಸ್ತಾವನೆ**

ಶ್ರೀ ಶಾರದಾ ದೇವಸ್ಥಾನ ಮತ್ತು ಶ್ರೀ ಶಾರದಾ ಮಂಟಪದ ಅಸುಪಾಸಿನ ಎಲ್ಲಾ ಬಡಾವಣೆ ಸೇರಿ ಆ ಪರಿಸರಕ್ಕೆ 'ಶ್ರೀ ಶಾರದಾ ನಗರ'ವೆಂದು ನಾಮಕರಣ ಮಾಡಬೇಕೆಂದು ಆಸುಪಾಸಿನ ನಾಗರಿಕರ ಒತ್ತಾಯದಂತೆ ಈಗಾಗಲೇ ನಾಗರಿಕರೆಲ್ಲರ ಪರವಾಗಿ ನಗರ ಸಭೆಗೆ ಪತ್ರ ಹಾಗೂ ಅರ್ಜಿ ಸಲ್ಲಿಕೆಯಾಗಿದೆ. ಇದೀಗ ಸಮಾರಂಭಕ್ಕೆ ಆಗಮಿಸಿದ ಶಾಸಕರು, ನಗರಸಭಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರ ಸಮ್ಮುಖದಲ್ಲಿ ಮತ್ತೆ ಮನವಿ ಸಲ್ಲಿಸಿ ನಾಗರಿಕರೆಲ್ಲರ ಪರವಾಗಿ ಉಡುಪಿಯ **'ಜ್ಞಾನ ಭಾರತಿ'**ಯ ಕಾರ್ಯದರ್ಶಿಗಳಾಧ ಶ್ರೀ ಎಸ್.ಎಲ್. ಕಾರಣಿಕ್ ಇವರು ಮಾತನಾಡಿ ಮೌಖಿಕ ಮನವಿ ಸಲ್ಲಿಸಿದರು. ನಗರ ಸಭೆಯ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು ನಗರ ಸಭೆಯ ನಿಯಮಾವಳಿಯಂತೆ ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತೇನೆಂದು ತಿಳಿಸಿದರು.



ನೂತನ ಸ್ವಾಗತ ಗೋಪುರ

**ಬ್ರಾಹ್ಮಣ ಸುವಾಸಿನಿ ಆರಾಧನೆ**

ಸಭೆ ಸಮಾರಂಭಗಳು ಮುಗಿದ ನಂತರ ಶ್ರೀ ಚಂಡಿಕಯಾಗದ ಪ್ರಸಾದವನ್ನು ಎಲ್ಲರಿಗೂ ವಿತರಿಸಲಾಯಿತು. ಅಲ್ಲದೆ ಮಧ್ಯಾಹ್ನ ಸುಮಾರು 500ಕ್ಕಿಂತಲೂ ಹೆಚ್ಚು ಜನರು ಅನ್ನಸಂತರ್ಪಣೆಯಲ್ಲಿ ಪಾಲ್ಗೊಂಡರು.

**ಬಾಂಧವರ ಸಹಕಾರ**

ಸಾಮೂಹಿಕ ಚಂಡಿಕಾಯಾಗವು ಪ್ರತಿವರ್ಷವೂ ನೆರವೇರುತ್ತಿದ್ದು ವರ್ಷದಿಂದ ವರ್ಷಕ್ಕೆ ಆಗಮಿಸುವ ಭಕ್ತ ಮಹಾಶಯರ ಸಂಖ್ಯೆ ಹೆಚ್ಚುತ್ತಿದೆ. ಆಸುಪಾಸಿನಿಂದ ಮಾತ್ರವಲ್ಲದೆ ದೂರದಿಂದಲೂ ಭಕ್ತಬಾಂಧವರು ಆಗಮಿಸಿ ಎಲ್ಲಾ ಕಾರ್ಯಕ್ರಮಗಳಲ್ಲಿ ಹೃತ್ಪೂರ್ವಕವಾದ ಸಹಕಾರ ನೀಡಿದ್ದಾರೆ.

### ಕೃತಜ್ಞತಾ ಅರ್ಪಣೆ

**ತಾ.14–12–2008ರಂದು ನೆರವೇರಿದ ಸಾಮೂಹಿಕ ಚಂಡಿಕಾಯಾಗ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರಿಗೆ, ನಿರ್ಮಿಸಿದ ಕಾಮಗಾರಿಯಲ್ಲಿ ಧನಸಹಾಯ ಮಾಡಿದ ದಾನಿಗಳಿಗೆ, ಸಮಾರಂಭದಲ್ಲಿ ಉಪಸ್ಥಿತರಿದ್ದ ನಮ್ಮ ಭಕ್ತ ಬಾಂಧವರಿಗೆ, ಚಂಡಿಕಾಯಾಗದ ಕರ್ತೃಗಳಾದ ಶ್ರೀ ಮೋಹನದೇವ್ ದಂಪತಿಗಳಿಗೆ, ಯಾಗವನ್ನು ವಿಧಿ ಪ್ರಕಾರ ನೆರವೇರಿಸಿದ ಶ್ರೀ ವಾಗೀಶ ಶಾಸ್ತ್ರಿ ಬಳಗದವರಿಗೆ, ಮಧ್ಯಾಹ್ನದ ಭೋಜನ ಕಾರ್ಯಕ್ರಮವನ್ನು ಸುವ್ಯವಸ್ಥೆಗೊಳಿಸಿದ ಶ್ರೀ ಮಂಜುನಾಥ್ ಹೆಬ್ಬಾರ್ ಮತ್ತು ಬಳಗದವರಿಗೆ, ವಿವಿಧ ಜವಾಬ್ದಾರಿಯಿಂದ ಕೆಲಸಗಳನ್ನು ಹಂಚಿಕೊಂಡು ಸಮಾರಂಭವನ್ನು ಚಂದಗಾಣಿಸಿದ ಎಲ್ಲ ವೇದಿಕೆಗಳ ಅಧ್ಯಕ್ಷರು, ಸಂಚಾಲಕರು ಮತ್ತು ಸದಸ್ಯರಿಗೆ ಹಾಗೂ ನಮ್ಮ ಸಮಾಜ ಬಾಂಧವರಿಗೆ ಆಡಳಿತ ಮಂಡಳಿಯು ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತದೆ.**

**– ಕಾರ್ಯದರ್ಶಿ**

## ಕಬ್ಬಿನಾಲೆ ಕುಚ್ಚೂರು ಕುಟುಂಬದ ಮನೆಗೆ ಬಾಳೆಕುದ್ರು ಶ್ರೀಗಳವರ ಭೇಟಿ



ಇತ್ತೀಚೆಗೆ ಕಬ್ಬಿನಾಲೆ ಪ್ರವಾಸಗೈದ ಶ್ರೀ ಶ್ರೀ ಬಾಳೇಕುದ್ರು ಮಠದ ಶ್ರೀಗಳವರು ತಾ.29–12–2008ರಂದು ಕುಚ್ಚೂರು ಕುಟುಂಬದ ಮನೆಗೆ ಭೇಟಿ ನೀಡಿದರು. ಶ್ರೀ ಸ್ವಾಮೀಜಿಯವರನ್ನು ಕುಟುಂಬದ ಹಿರಿಯರಾದ ಕೃಷ್ಣಯ್ಯ ಹೆಬ್ಬಾರ್‌ರವರು ಮಂಗಳವಾದ್ಯ ಮತ್ತು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ಬಳಿಕ ಕುಟುಂಬದವರಿಂದ ಸ್ವಾಮೀಜಿಯವರಿಗೆ ಪಾದಪೂಜೆ, ಕಾಣಿಕೆಗಳನ್ನು ಸಮರ್ಪಿಸಲಾಯಿತು. ಕುಟುಂಬದವರೇ ಆದ ಬಾಯರಬೆಟ್ಟು ಸೀತಾರಾಮ ಹೆಬ್ಬಾರರವರು ಕುಟುಂಬದ ಇತಿಹಾಸವನ್ನು ಸ್ವಾಮೀಜಿಯವರಿಗೆ ಸಂಕ್ಷಿಪ್ತವಾಗಿ ತಿಳಿಸಿದರು. ತರುವಾಯ ಸ್ವಾಮೀಜಿಯವರು ಅನುಗ್ರಹ ಭಾಷಣ ಮಾಡಿ ಫಲಮಂತ್ರಾಕ್ಷತೆಯನ್ನು ನೀಡಿ ತಮ್ಮ ಪ್ರವಾಸ ಮುಂದುವರಿಸಿದರು.

## ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ಕುಂದಾಪುರ ತಾಲೂಕು ಚಾತಿಪಾಲ ದಿ| ನರಸಿಂಹರಾಯರ ಧರ್ಮಪತ್ನಿ ಶ್ರೀಮತಿ ಯಶೋದಮ್ಮ ಇವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವು ಕುಂದಾಪುರ ತಾಲೂಕು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಕುಂಭಾಶಿ ಶ್ರೀ ಸಿದ್ಧಿವಿನಾಯಕ ಕೃಪಾದಲ್ಲಿ ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಎಚ್. ಹಿರಿಯಣ್ಣ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಗೋಪಿನಾಥ ಹೆಬ್ಬಾರ ಚಾತಿಪಾಲ ಇವರು ಸ್ವಾಗತಿಸಿ ಶ್ರೀ ಪಿ. ಶೇಷಪ್ಪಯ್ಯನವರು ಪ್ರಾಸ್ತಾವಿಕ ಭಾಷಣಗೈದರು. ಮುಖ್ಯ ಅತಿಥಿಗಳಾಗಿ ಪ್ರೊ| ಕೆ. ಶಂಕರರಾವ್ ಕಾಳಾವರ, ಶ್ರೀ ಸುಬ್ರಹ್ಮಣ್ಯ ಜೋಷಿ ಸಿದ್ದಾಪುರ ಹಾಗೂ ಶ್ರೀ ವೆಂಕಟ್ರಾವ್ ಕುಂದಾಪುರ ಇವರು ಮೃತರ ಗುಣಗಾನ ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಮೃತರ ಮಕ್ಕಳಾದ ಶ್ರೀಮತಿ ವಿನಯರಾವ್, ಶ್ರೀಮತಿ ವಿನುತ, ಶ್ರೀಮತಿ ವಿಜಯರವರು ತಾಯಿಯವರ ಸ್ಮರಣಾರ್ಥ ಸಂಘದಲ್ಲಿ ಮೃತರ ಹೆಸರು ಚಿರಸ್ಥಾಯಿಯಾಗಿ ಉಳಿಯಲು ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಎಚ್. ಹಿರಿಯಣ್ಣ ರಾವ್‌ರವರಿಗೆ ಶ್ರೀಯುತ ಪ್ರಭಾಕರರಾವ್ ಮಂಗಳೂರು ಇವರಿಂದ ದೇಣಿಗೆಯನ್ನು ಹಸ್ತಾಂತರಿಸಿದರು. ಅಲ್ಲದೇ ಚಾತಿಪಾಲ ದೇವಸ್ಥಾನಕ್ಕೆ ದೇಣಿಗೆಯನ್ನೂ ನೀಡಿದರು. ಮಾರ್ಕೊಳಿ ದತ್ತಾತ್ರೇಯರವರು ಧನ್ಯವಾದವಿತ್ತರು. ಶ್ರೀ ಮಂಜುನಾಥ ಹೆಬ್ಬಾರ್, ಉಪ್ಪಿನಕುದ್ರು ಕಾರ್ಯಕ್ರಮ ನಿರ್ವಹಿಸಿದರು.

ವರದಿ : **ಎಚ್. ಆನಂದರಾವ್, ಹೊಸ್ಕೋಟೆ**

**ಸ್ಥಾನಿಕ ಬ್ರಾಹ್ಮಣ ವಧೂವರರ ಬೃಹತ್ ಸಮಾವೇಶ**

**ದಿನಾಂಕ 1–02–2009 ಪೂರ್ವಾಹ್ನ ಗಂಟೆ 9–00ರಿಂದ 12–00ರ ವರೆಗೆ**

**ಸ್ಥಳ : ಶ್ರೀ ಸುಬ್ರಹ್ಮಣ್ಯ ಸಭಾಸದನ, ಬಿಜೈ ರಸ್ತೆ, ಮಂಗಳೂರು.**

ವಧೂವರರು ತಮ್ಮ ಪಾಲಕರೊಂದಿಗೆ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಈ ಸಮಾವೇಶದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ವಿ.ಸೂ. : ಸಮಾಜದ ವಧೂವರರ ವಿವಾಹ ಮಾಹಿತಿ ಕೇಂದ್ರಗಳನ್ನು ನಡೆಸುವವರು ಕೂಡಾ ತಮ್ಮಲ್ಲಿರುವ ಮಾಹಿತಿಗಳೊಂದಿಗೆ ಆಗಮಿಸಿ ಸಹಕರಿಸಬೇಕಾಗಿ ವಿನಂತಿ

ಹೆಚ್ಚಿನ ವಿವರಗಳಿಗೆ : **ಶ್ರೀ ಎಂ. ಚೇತನ್ ಶರ್ಮ, ಮಂಗಳೂರು. 98441 87083, 2431828**
**ಶ್ರೀಮತಿ ವೈಜಯಂತಿ ಬೆಳ್ಳೆ, ಮಂಗಳೂರು. 92422 04848**
**ಶ್ರೀ ವಸಂತ ರಾವ್, (ಕರಂಬಳ್ಳಿ) ಉಡುಪಿ 2536473**


**ರಾಮಾ ಅಟೋಮೊಬೈಲ್ಸ್**


ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು – 575 006.

**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ





ಉಡುಪಿ ವಿಶಿಷ್ಟ ರುಚಿಯುಳ್ಳ

**Rao's 'ಮಾತೃಛಾಯಾ'ರವರ**

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**–: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :–**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ – 576 101. ಫೋನ್ : 2522444**

**PRAMOD**
**AUTOMOBILES**

Ph : 2491723 (O)
2493633 (H.O.)
2212723 (R)


KARANGALPADY, MANGALORE - 575 003.

: Wholesale & Retail Dealers in :

2 & 3 WHEELERS SPARES & ACCESSORIES

Prop. : **Ln. K. HARSHA KUMAR**

# ಹೆಚ್ಚು ಬರೆದವನಲ್ಲ



– ವೈ. ಶಂಕರ ನಾರಾಯಣ ರಾವ್, ಪಡುಬಿದಿರೆ.

**ಲೇಖಕರಾದ ಶ್ರೀ ವೈ. ಶಂಕರ ನಾರಾಯಣ ರಾವ್ ಇವರ ಇಪ್ಪತ್ತೈದನೇ ಲೇಖನ "ಆತ್ಮಜ್ಞಾನಿ ಜಡಭರತ ಋಷಿ" ಕಳೆದ ಸಂಚಿಕೆಯಲ್ಲಿ ಭಾಗಶಃ ಪ್ರಕಟವಾಗಿದ್ದು ಉಳಿದ ಭಾಗ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ತನ್ನ ಜೀವನಾನುಭವವನ್ನು ಮತ್ತು ಲೇಖಕನಾಗಿ ಶ್ರೀ ಶಾರದಾ ಪತ್ರಿಕೆಯೊಂದಿಗೆ ಬೆಳೆದು ಬಂದ ಪರಿಯ ಸೊಬಗನ್ನು "ಹೆಚ್ಚು ಬರೆದವನಲ್ಲ" ಎಂಬ ಈ ಲೇಖನದ ಮೂಲಕ ಮೂಡಿಸಿ ಕಹಿಸಿಹಿ ನೆನಪುಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಇವರಿಗೆ ಪ್ರೀತ್ಯಾದರಗಳೊಂದಿಗೆ ಕೃತಜ್ಞತೆಗಳು.**

**– ಸಂಪಾದಕ ಮಂಡಳಿ**

"ಶ್ರೀ ಶಾರದಾ" ಪತ್ರಿಕೆಯ ಅಭಿಮಾನಿ ಓದುಗ ಬಾಂಧವರಿಗೆ ಆತ್ಮೀಯ ಪ್ರಣಾಮಗಳು

ನಾನು ಕಳೆದ 7 ವರ್ಷಗಳಿಂದ ನಿರಂತರವಾಗಿ ಪತ್ರಿಕೆಗೆ ಬರೆಯುತ್ತಿದ್ದೇನೆ. ನವಂಬರ್ 2001ರಲ್ಲಿ ಪ್ರಕಟವಾದ "ಅನುಗಾಲವೂ ಚಿಂತೆ ಜೀವಕೆ" ಲೇಖನದಿಂದ ಮೊದಲ್ಗೊಂಡು ಡಿಸೆಂಬರ್ 08 – ಜನವರಿ 09ರ ಸಂಚಿಕೆಗಳಲ್ಲಿ ಕಾಣಿಸಿಕೊಂಡ 'ಆತ್ಮಜ್ಞಾನಿ ಜಡಭರತ ಋಷಿ' ಕಥೆಯವರೆಗೆ ನನ್ನ ಒಟ್ಟು 25 ಬರಹಗಳು ಈ ಪತ್ರಿಕೆಯಲ್ಲಿ ಜೀವ ತಳೆದಿದೆ. ಈ ಅವಧಿಯಲ್ಲಿ ನಾನು ಲೇಖನ, ಕಥೆ, ವ್ಯಕ್ತಿ ಚಿತ್ರಣ, ಪರಿಸರದ ಕಥೆ ಮೊದಲಾದ ಸಾಹಿತ್ಯದ ವಿವಿಧ ವಿಭಾಗಗಳಲ್ಲಿ ವೈವಿಧ್ಯಮಯವಾಗಿ ಬರೆದಿದ್ದೇನೆ. ನಮ್ಮ ಪತ್ರಿಕೆಗೆ ಇಷ್ಟೊಂದು ವೈವಿಧ್ಯಮಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರೆದವನು ಪ್ರಾಯಶಃ ನಾನೊಬ್ಬನೇ ಇರಬೇಕು. ನಿಂತಲ್ಲೇ ಮೂರು ಮೊಳ ನೇಯಬಲ್ಲ ವೃತ್ತಿಪರ ಲೇಖಕನಂತೂ ನಾನಲ್ಲ. ನಾನೇನಿದ್ದರೂ ಬ್ಯಾಂಕ್ ಅಧಿಕಾರಿಯಾಗಿದ್ದು 36 ವರ್ಷಗಳ ಸೇವೆಯ ಬಳಿಕ ಸ್ವಯಂನಿವೃತ್ತನಾದ ಮೇಲೆ ಇಳಿವಯಸ್ಸಿನಲ್ಲಿ ಬರಹವನ್ನು ಹವ್ಯಾಸವಾಗಿ ರೂಢಿಸಿಕೊಂಡವನು. ಆದುದರಿಂದ ಈ 25ರ ಸಂಖ್ಯೆ ನನ್ನಂತವನಿಗೆ ಒಂದು ಸಾಧನೆಯ ಮೈಲುಗಲ್ಲಾಗಿ ಮಹತ್ವ ಧ್ವನಿಸುತ್ತದೆ. ಇದಕ್ಕೆ ಒತ್ತಾಸೆಯಾಗಿ ನನಗೆ 'ಶ್ರೀಶಾರದಾ' ಪತ್ರಿಕೆಯ ಸಂಪಾದಕವರ್ಗದ ಸ್ನೇಹಿರತರು ದೊರಕಿದರು ಎಂಬುದನ್ನು ಮರೆಯಲಾರೆ.

ನನ್ನನ್ನು ಸಮೀಪದಿಂದ ಬಲ್ಲ ಹಲವು ಸಹೃದಯೀ ಬಾಂಧವರು ನಾನು ಬರಹಗಾರನಾಗಲು ಹಿನ್ನಲೆ ಏನಾದರೂ ಇದೆಯೇ ಎಂದು ಪ್ರಶ್ನಿಸಿದ್ದಾರೆ. ಒಬ್ಬ ಒಳ್ಳೆಯ ಬರಹಗಾರನಾಗಲು ಒಳ್ಳೆಯ ಓದುಗನೂ ಆಗಿರಬೇಕೆಂದು ನನ್ನ ದೃಢ ನಂಬಿಕೆ. ಓದುವ ಹವ್ಯಾಸವಂತೂ ನನಗೆ ಧಾರಾಳವಾಗಿಯೇ ಇತ್ತು. ಸುಮಾರು 10ವರ್ಷಗಳ ಅವಧಿಗೆ ಬಜಪೆ ಪಂಚಾಯತಿನ ಅಧ್ಯಕ್ಷರೂ ಪ್ರಸಿದ್ಧ ಆಯುರ್ವೇದ ವೈದ್ಯರೂ ಆಗಿದ್ದ ನನ್ನ ತಂದೆಯವರು ಸಾಹಿತ್ಯಪ್ರಿಯರೂ ಆಗಿದ್ದರು. ನನ್ನ ಹಿರಿಯ ಸಹೋದರಿಯರಿಬ್ಬರೂ ಸಾಹಿತ್ಯ, ಸಂಗೀತಗಳಲ್ಲಿ ಅಭಿರುಚಿಯನ್ನೂ ಹೊಂದಿದ್ದರು. ಇವರಿಬ್ಬರೂ ಕನ್ನಡ ಸಾಹಿತ್ಯದಲ್ಲಿ ನನ್ನಲ್ಲಿ ವಿಶೇಷವಾದ ಆಸಕ್ತಿಯನ್ನು ಬಾಲ್ಯದಲ್ಲಿ ಬಿತ್ತಿದರು ಎಂದು ಅನ್ನಬಹುದು. ನಾನು ಕಾರ್ಕಳದಲ್ಲಿ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದಾಗಲೇ ಕುವೆಂಪುರವರ 'ಕಾನೂರು ಹೆಗ್ಗಡಿತಿ', ಕಾರಂತರ 'ಮರಳಿ ಮಣ್ಣಿಗೆ', ದೇವುಡುರವರ 'ಮಹಾಬ್ರಾಹ್ಮಣ' ಕಾದಂಬರಿಗಳನ್ನೂ ಇನ್ನಿತರ ಒಳ್ಳೆಯ ಪುಸ್ತಕಗಳನ್ನು ಓದಿ ಮುಗಿಸಿದ್ದೆ. ವಿಧಿಲಿಖಿತವೋ ಎಂಬಂತೆ ನನ್ನ ಹೈಸ್ಕೂಲು ವಿದ್ಯಾಭ್ಯಾಸ ಮುಗಿಯುವ ಹೊತ್ತಿಗೆ {1961ನೇ ಇಸವಿ} ಆಗ ಕಾರ್ಕಳದಲ್ಲಿ ನೆಲೆಸಿದ್ದ ನಾವು ಎಲ್ಲವನ್ನೂ ಕಳೆದುಕೊಂಡು ಅಕ್ಷರಶಃ ಘೋರ ಬಡತನದ ಕೂಪಕ್ಕೆ ತಳ್ಳಲ್ಪಟ್ಟೆವು.

ಇನ್ನೂ ಹದಿನೆಂಟರ ವಯಸ್ಸು ನಡೆಯುತ್ತಿರುವಾಗಲೇ ಕಿರಿಯ ಸಹೋದರ ಸಹೋದರಿಯರನ್ನು ಒಳಗೊಂಡ 7–8 ಜನರ ಸಂಸಾರವನ್ನು ಸಲಹುವ ಹೊಣೆ ಮನೆಯ ಹಿರಿಮಗನಾದ ನನ್ನ ಹೆಗಲ ಮೇಲೆ ಬಿದ್ದಿತು. ಆ ಸಮಯದಲ್ಲಿ ಪೂಜ್ಯರುಗಳಾದ ಶ್ರೀ ಟಿ.ಎ.ಪೈ., ಶ್ರೀ ಅಂಬಲ್ಪಾಡಿ ಕೃಷ್ಣರಾಯರು ಶ್ರೀರಕ್ಷೆಯಾಗಿ ನನ್ನ ನೆರವಿಗೆ ಬಂದು ತಮ್ಮ ಸಿಂಡಿಕೇಟ್ ಬ್ಯಾಂಕಿನಲ್ಲಿ ನನಗೆ ಉದ್ಯೋಗವನ್ನು ಕೊಡಿಸಿ ಪ್ರತ್ಯಕ್ಷ ದೇವರುಗಳಾದರು. ಹಲವು ವರ್ಷ ಪರವೂರುಗಳಲ್ಲಿದ್ದುಕೊಂಡು ಆಗಿನ ಪ್ರಾರಂಭದ ಕೇವಲ ರೂ.120ರಿಂದ 150ರ ಒಳಗಿನ ವೇತನದಲ್ಲಿ ನಾನು ನನ್ನನ್ನೂ ಊರಿನಲ್ಲಿರುವ ನನ್ನ ಸಂಸಾರವನ್ನೂ ಸಲಹಬೇಕಾಗಿತ್ತು. ಮುಂದೆ ಜಿಲ್ಲೆಗೆ ವರ್ಗಾವಣೆಗೊಂಡ ನಂತರ ನನ್ನ ಇಬ್ಬರು ಹಿರಿಯ ಸಹೋದರಿಯರ ಕಷ್ಟಕೋಟಲೆಗಳಿಗೂ ನಾನು ಸ್ಪಂದಿಸಬೇಕಾಯಿತು. ಈ ದುರ್ಭರ ಪರಿಸ್ಥಿತಿ ಸುಮಾರು 15ವರ್ಷಗಳಷ್ಟು ದೀರ್ಘಕಾಲ ಮುಂದುವರಿದಾಗ ನಾನು "ನನ್ನ ಭವಿಷ್ಯವೇ ಶೂನ್ಯ; ನನ್ನದು ಅಸ್ತಿತ್ವಕ್ಕಾಗಿ ನಡೆಸುವ ಏಕಾಂಗೀ ಹೋರಾಟ" ಎಂಬ ಮನಸ್ಥಿತಿಯಲ್ಲಿ ಕೊರಗುವಂತಾಯಿತು. ಇದನ್ನು ಮರೆಯಲು ನಾನು ಏನಾದರೂ ದುಶ್ಚಟವನ್ನು ಅಂಟಿಸಿಕೊಳ್ಳಬೇಕಿತ್ತು. ಆದರೆ ನಾನು ಓದುವ ಒಳ್ಳೆಯ ಹವ್ಯಾಸವನ್ನೇ ರೂಢಿಸಿಕೊಂಡೆ. ಆ ಹವ್ಯಾಸವೇ ಇಂದಿನವರೆಗೂ ಉಳಿದುಕೊಂಡು ಬಂದಿದೆ. ಇಲ್ಲಿಯವರೆಗೆ ನಾನು ಸಾವಿರಾರು ಪುಸ್ತಕಗಳನ್ನು ಓದಿದ್ದೇನೆ. ಆಯ್ದ ಪುಸ್ತಗಳನ್ನೂ, ನಿಯತಕಾಲಿಕೆಗಳನ್ನೂ ಕೊಂಡು ಓದುವ ಹವ್ಯಾಸ ಈಗಲೂ ಮುಂದುವರೆದಿದೆ.

ಇನ್ನು ನಾನು ಬರಹಗಾರನಾದ ವಿಚಾರ. ಇದು ಕೇವಲ ಆಕಸ್ಮಿಕ. ಆಗ "ಶ್ರೀಶಾರದಾ" ಪತ್ರಿಕೆಯನ್ನು ಶಾರದಾ ಮಂಟಪದ ಹಲವು ಉತ್ಸಾಹೀ ಯುವಕರು ಹುಟ್ಟುಹಾಕಿ ಕೆಲವು ತಿಂಗಳುಗಳು ಕಳೆದಿದ್ದವಷ್ಟೇ. ಪತ್ರಿಕೆ ನಾಲ್ಕು ಪುಟಗಳಲ್ಲಿ ಉಚಿತವಾಗಿಯೇ ಮನೆಗೆ ಬರುತ್ತಿತ್ತು. ಪತ್ರಿಕೆಯ ಸಂಪಾದಕರು ಬರಹಗಳನ್ನು ಆಹ್ವಾನಿಸುತ್ತಿದ್ದರೂ ಪ್ರತಿಕ್ರಿಯೆ ಮಾತ್ರ ನಿರಾಶಾದಾಯಕವಾಗಿರುತ್ತಿತ್ತು ಎಂದು ಕಾಣುತ್ತದೆ. ಈ ಪರಿಸ್ಥಿತಿಯಲ್ಲಿ ಒಂದು ದಿನ ನಾನೂ ಏಕೆ ಬರೆಯಲು ಪ್ರಯತ್ನಿಸಬಾರದು ಎಂದು ಆಲೋಚಿಸಿದೆ. ಅದರ ಫಲವೇ ನವೆಂಬರ್ 2001ರ ಸಂಚಿಕೆಯಲ್ಲಿ ಬಂದ ನನ್ನ ಮೊಟ್ಟಮೊದಲ ಲೇಖನ "ಅನುಗಾಲವೂ ಚಿಂತೆ ಜೀವಕೆ". ಇದಕ್ಕೆ ಉತ್ತಮ ಪ್ರತಿಕ್ರಿಯೆಗಳು ಬಂದಿವೆ ಎಂದು ಸಂಪಾದಕರು ತಿಳಿಸಿದರು. ಅನಂತರ ನಾನು ಹಿಂದಿರುಗಿ ನೋಡಿದವನಲ್ಲ. 3–4 ತಿಂಗಳಿಗೊಂದರಂತೆ ಸಾಹಿತ್ಯವನ್ನು ಬರೆಯುತ್ತಲೇ ಬಂದಿದ್ದೇನೆ. ನಾನು "ಪುರುಷಪ್ರಯತ್ನ", "ಉತ್ತಮ ಪ್ರಭುತ್ವ", "ಕಾಮನೆಗಳಿಗೆ ಬೇಕು ಕಡಿವಾಣ"ಗಳಂತಹ ವೈಚಾರಿಕ ಲೇಖನಗಳನ್ನು, "ವಿವಾಹಕಾಂಡ", "ಹೆಣ್ಣಾಗಿ ಕಾಡಿತ್ತು ಮಾಯೆ", "ಕೋಪಸಲ್ಲದು" ಮೊದಲಾದ ಲಘುಧಾಟಿಯ ಲೇಖನಗಳನ್ನೂ ಪತ್ರಿಕೆಗೆ ಬರೆದೆ. ನಾನು ಪಾತ್ರಗಳ ಅಂತರಂಗದ ಪರಕಾಯ ಪ್ರವೇಶ ಮಾಡಿ ಪಾತ್ರಗಳ ಬಾಯಿಂದಲೇ ಹೇಳಿಸಿದ "ಊರ್ವಶೀ ಪ್ರಣಯ ಪ್ರಸಂಗ", "ಎಲ್ಲೋ ಚಂದಿರ ನಿನ್ನ ಅರಮನೆ?" ಎಂಬ ವಿಶಿಷ್ಟ ರೂಪದ ಪೌರಾಣಿಕ ಕಥೆಗಳು ಹಲವು ಓದುಗ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿವೆ. ನಾನು ಬರೆದ ಸಾಮಾಜಿಕ ಕಥೆ "ರಮಣನಿಲ್ಲದ ನಾರಿ" ಕೂಡಾ ಜನಪ್ರಿಯವಾಯಿತು.

ನಾನು ಆಧ್ಯಾತ್ಮದಂತಹ ಗಹನ ವಿಷಯವನ್ನು ಅಲ್ಲಲ್ಲಿ ಅಷ್ಟಿಷ್ಟು ಬರೆದಿರಬಹುದಾದರೂ ಅದು ನನ್ನ ನೆಚ್ಚಿನ ವಿಷಯವಲ್ಲ. ಆದುದರಿಂದ ನಾನು ಆಧ್ಯಾತ್ಮವನ್ನು ಒಳಗೊಂಡ ಪೂರ್ಣ ಪ್ರಮಾಣದ ಲೇಖನವನ್ನು ಬರೆದಿಲ್ಲ. ನನ್ನ ಕಷ್ಟದ ದಿನಗಳಲ್ಲಿ ನಾನೆಂದೂ ಆಧ್ಯಾತ್ಮ, ಜ್ಯೋತಿಷ, ಜಾತಕಫಲಗಳ ಮೊರೆ ಹೋದವನಲ್ಲ. ಕಷ್ಟಗಳನ್ನು ಎದುರಿಸಿ ಜೀವನದಲ್ಲಿ ಕಷ್ಟ–ಸುಖಗಳನ್ನು ಬಂದಂತೆಯೇ ಸಮಾನವಾಗಿ ಸ್ವೀಕರಿಸುವುದರಲ್ಲಿಯೇ ಸಾರ್ಥಕತೆ ಅಡಗಿದೆ ಎನ್ನುತ್ತದೆ ನನ್ನ ಜೀವನಾನುಭವ. ಸಹೃದಯೀ ಬಾಂಧವರು ಇದನ್ನೇ ಆಧ್ಯಾತ್ಮದ ತಳಹದಿ ಎಂದು ಭಾವಿಸಿದರೆ ನನ್ನ ಅಭ್ಯಂತರವೇನಿಲ್ಲ. ನಾನು ಓದುಗರಿಗೆ ಅತ್ಯುತ್ತಮ ನೈತಿಕ, ಧನಾತ್ಮಕವಾದವುಗಳನ್ನೇ ಕೊಡಲು ಪ್ರಯತ್ನಿಸಿದ್ದೇನೆ. ನಾನು ಯಾರ ಮನಸ್ಸನ್ನು ನೋಯಿಸುವಂತಹಾಗಲೀ, ಯಾರನ್ನಾದರೂ ಗುರಿ ಇರಿಸಿಯಾಗಲೀ ಬರೆದವನಲ್ಲ. ಹಾಗೆ ನನ್ನ ಲೇಖನಗಳನ್ನು ಯಾರಾದರೂ ತಮಗೆ ತಾವೇ ಆರೋಪಿಸಿಕೊಂಡಿದ್ದರೆ ಅದು ಅವರ ಕರ್ಮ ಅಷ್ಟೇ. ಕಳೆದ ಈ ಎಲ್ಲಾ ವರ್ಷಗಳಲ್ಲಿ ಓದುತ್ತಾ, ಬರೆಯುತ್ತಾ ನನ್ನ ಜ್ಞಾನ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುತ್ತಿದ್ದಂತೆಯೇ ಪತ್ರಿಕೆಯೊಂದಿಗೆ ನಾನು ಬೆಳೆದೆ. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ನನ್ನ ಆತ್ಮ ಸಂತೋಷಕ್ಕಾಗಿ ಬರೆದು ಪತ್ರಿಕೆಯ ಘನತೆಯನ್ನು ಹೆಚ್ಚಿಸಲು ನನ್ನ ಕೈಲಾದ ಕಾಣಿಕೆಯನ್ನು ನೀಡಿದ್ದೇನೆ. ಇಷ್ಟಾದರೂ ನಾನಿನ್ನೂ ಕನ್ನಡ ಸಾಹಿತ್ಯವನ್ನು ಬರೆಯಲು ಕಲಿಯುತ್ತಿರುವ ವಿದ್ಯಾರ್ಥಿ ಎಂದೇ ನನ್ನ ಭಾವನೆ. ಈ ಎಚ್ಚರಿಕೆಯ ತೂಗುಕತ್ತಿ ಸದಾ ನನ್ನ ನೆತ್ತಿಯ ಮೇಲೆ ತೂಗುತ್ತಿರುತ್ತದೆ.

ನನ್ನನ್ನು ಸಮೀಪದಿಂದ ಬಲ್ಲ ಹಲವು ಮಹನೀಯರೂ, ಮಹಿಳೆಯರೂ ನನ್ನನ್ನು ಭೇಟಿಯಾದಾಗಲೂ, ದೂರವಾಣಿ ಮೂಲಕವೂ ನನ್ನ ಬರಹಗಳ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿ ನನ್ನನ್ನು ಹುರಿದುಂಬಿಸಿದ್ದಾರೆ. ವಿಶೇಷವಾಗಿ ಉಲ್ಲೇಖಿಸುವುದಾದರೆ ಪತ್ರಿಕೆಯ ಮಹಾ ಪೋಷಕರಾದ ಶ್ರೀ ಪಿ.ಆರ್. ಸದಾಶಿವರಾಯರು ಈವರೆಗೂ, ಅವರ ಪತ್ನಿ ದಿ। ಶಾಂಭವಿ ದೇವಿಯವರು ಅವರು ಜೀವಿಸಿದ್ದವರೆಗೂ ಭೇಟಿಯಾದಾಗಲೆಲ್ಲಾ ನನ್ನ ಸಾಹಿತ್ಯದ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿ ಆಶೀರ್ವದಿಸಿದ್ದಾರೆ. ನನ್ನ ಬರಹಗಳ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ಹೊಂದಿದ್ದು ಅದನ್ನು ವ್ಯಕ್ತಪಡಿಸಲಾಗದ ಬಾಂಧವರೂ ಹಲವರಿರಬಹುದು. ಇನ್ನು ಪತ್ರಿಕೆಯ ಸಂಪಾದಕ ವರ್ಗದ ಸ್ನೇಹಿತರಂತೂ ಸರಿಯೇ ಸರಿ. ಎಷ್ಟು ಹೊಗಳಿದರೂ ಸಾಲದು. ಇನ್ನಷ್ಟು ಕೊಡಿ, ಮತ್ತಷ್ಟು ಕೊಡಿ ಎಂದು ಕೇಳಿಯ, ಕೇಳದೇ ನನಗೆ ಕೊಟ್ಟುದನ್ನು ಪ್ರಕಟಿಸಿ ಇನ್ನಿಲ್ಲದಂತೆ ಪ್ರೋತ್ಸಾಹಿಸಿದ್ದಾರೆ. ಇವರೆಲ್ಲರಿಗೂ, ಮಿಕ್ಕ ಹಿತೈಷಿ ಅಜ್ಞಾತ ಬಾಂಧವರಿಗೂ ನನ್ನ ಹಾರ್ದಿಕ ಕೃತಜ್ಞತಾ ಪೂರ್ವಕವಾದ ಧನ್ಯವಾದಗಳು. ನನಗೆ ಸ್ಫೂರ್ತಿಯನ್ನು ನೀಡಿದ ಪೂರ್ವ ಸೂರಿಗಳಾದ ಕುಮಾರ ವ್ಯಾಸ, ಕವಿಸರ್ವಜ್ಞ ವಚನಕಾರರು, ಸುಭಾಷಿತ ರಚಯಿತರು ಇವರಿಗೆಲ್ಲಾ ನಮಿಸಿ, ಸಮಕಾಲೀನ ಆಧುನಿಕ ಕವಿಗಳನ್ನು ಸಾಹಿತಿಗಳನ್ನು ಸ್ಮರಿಸಿಕೊಳ್ಳುತ್ತಿದ್ದೇನೆ.

ಈಗ ನನಗೆ 65ರ ವಯಸ್ಸು ನಡೆಯುತ್ತಿದೆ. ದೀರ್ಘಕಾಲದ ಅನಾರೋಗ್ಯದೊಂದಿಗೆ ಇಳಿವಯಸ್ಸಿನ ತೊಂದರೆಗಳೂ ಸಾಕಷ್ಟಿವೆ. ಔಷಧಿಗಳ ಅಡ್ಡ ಪರಿಣಾಮದಿಂದಲೋ ಏನೋ ಯಾಕೆ ಓದಬೇಕು, ಬರೆಯಬೇಕು, ಏನನ್ನಾದರೂ ಮಾಡಬೇಕು? ಎಂಬ ಹತಾಶೆಯ ಖಿನ್ನತೆ ಆಗಾಗ ಆವರಿಸುತ್ತಾ ಇರುತ್ತದೆ. ಶ್ರೀ ಶಾರದಾ ಮಾತೆ ಕಾರುಣ್ಯದ ಅಭಯ ಸಿಂಚನವನ್ನಿತ್ತು ಭಾವ ಸ್ಫುರಣೆಯಾಗುವಂತೆ ಅನುಗ್ರಹಿಸಿ ನನ್ನ ಕೈ ಹಿಡಿದು ಬರೆಸುತ್ತಲೇ ಇದ್ದಾಳೆ. ಈ ಭಗವತ್ ಕರುಣೆ ಒದಗಿ ಬರುತ್ತಾ ಇರುವವರೆಗೆ, ಸಂಪಾದಕರಿಂದ ಗ್ರೀನ್‌ಸಿಗ್ನಲ್ ದೊರಕುತ್ತಿರುವವರೆಗೆ ನಾನು ಬದ್ಧತೆಯಿಂದ ಅವಿರತವಾಗಿ ಪತ್ರಿಕೆಗೆ ಬರೆಯುತ್ತಲೇ ಇರುತ್ತೇನೆ. ನನ್ನ ಬರಹಗಳಿಗೆ ಪೂಜ್ಯ ಶ್ರೀ ಸೇಡಿಯಾಪು ಕೃಷ್ಣ ಭಟ್ಟರ ಈ ಸಾಲುಗಳೇ ಸದಾ ಸ್ಫೂರ್ತಿ.

"ಹೆಚ್ಚು ಬರೆದವನಲ್ಲ/ನಿಚ್ಚ ಬರೆದವನಲ್ಲ/ ಮೆಚ್ಚಿಸಲು ಬರೆಯುವಭ್ಯಾಸವಿಲ್ಲ/ಇಚ್ಛೆಗೆದೆಯೊಪ್ಪಿ ಬಗೆ/ ಬಿಚ್ಚಿದರೆ ಕಣ್ಣೆ ಮಯ್ ಎಚ್ಚುವಂದದಿ ತೀಡಿತಿದ್ದಿ ಬರೆವೆ".

ನನ್ನದೇ ಮಾತುಗಳಲ್ಲಿ ನಾನು ಹೇಳುವುದೇನೆಂದರೆ :

***ತಿಣುಕಿ ಬರೆದವನಲ್ಲ***<br>
***ಅಣಕಿಸಲು ಬರೆದವನಲ್ಲ***<br>
***ಕಣ್ಣಳವಿನೊಳಗೇ ಕಣ್ಣರಿಸಿದನಲ್ಲ***<br>
***ಗುಣಧರ್ಮ ದೋಷಗಳ***<br>
***ಬಣ್ಣಿಸಲು ಬರೆದೆ ಅತಿ***<br>
***ಜಾಣನೆಂಬಹಮಿಕೆಯು ನನ್ನೊಳಿಲ್ಲ***

ಸಮಾಜ ಬಾಂಧವರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಸರ್ವೇಜನಾಃ ಸುಖಿನೋಭವಂತು. □

# ಅಭಿನಂದನಾ ಸಮಾರಂಭ

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಇದರ ವತಿಯಿಂದ ದಿನಾಂಕ 4–1–2009ನೇ ಭಾನುವಾರದಂದು ರಾಷ್ಟ್ರದ ಅತ್ಯುನ್ನತ ಹಾಗೂ ಪ್ರತಿಷ್ಠಿತ ಪುರಸ್ಕಾರಗಳಲ್ಲೊಂದಾದ ಪದ್ಮಶ್ರೀ ಪುರಸ್ಕೃತ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿಗಳಾದ ಶ್ರೀ ವಿ. ಆರ್. ಗೌರಿಶಂಕರ್ ಇವರನ್ನು ವೀಣೆ ಶೇಷಣ್ಣ ಭವನ ಮೈಸೂರು ಇಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಸಂಜೆ ಸುಮಾರು 7–00ಗಂಟೆಗೆ ಸರಿಯಾಗಿ ಶ್ರೀ ಗೌರಿಶಂಕರರನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಹಾಗೂ ವಿಪ್ರರ ವೇದಘೋಷದೊಂದಿಗೆ ವೇದಿಕೆಗೆ ಕರೆತರಲಾಯಿತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸತ್ಯ ಶಂಕರ ಬೊಳ್ಳಾವೆ, ಧರ್ಮಾಧಿಕಾರಿ ಶ್ರೀ ಶೃಂಗೇರಿ ಶಂಕರ ಮಠ ಕೋಟೆಕಾರು ಮಂಗಳೂರು, ಶ್ರೀ ಹೆಚ್. ರಾಮಚಂದ್ರ ಧರ್ಮದರ್ಶಿ ಶ್ರೀ ಶೃಂಗೇರಿ ಶಂಕರ ಮಠ, ಮೈಸೂರು, ಶ್ರೀ ಕೆ. ರಘುರಾಮ್ ಸಭಾಪತಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ, ಮೈಸೂರು, ಶ್ರೀ ಉಮೇಶ್ ರಾವ್, ಎರ್ಮಾಳು, ಅಧ್ಯಕ್ಷರು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು, ಶ್ರೀ ಕೆ.ವಿ. ಗಣೇಶ ಅಧಿಕಾರಿ ಕಾರ್ಯದರ್ಶಿಗಳು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಮತ್ತು ಪ್ರೊ. ಕೆ. ರಾಮಮೂರ್ತಿ ರಾವ್ ಸಂಚಾಲಕರು, ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕುಮಾರ ವಿಶ್ವದೀಪ್ ಪ್ರಾರ್ಥನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಡಾ। ಅಶ್ವತ್‌ರವರು ತನ್ನ ಸ್ವಾಗತ ಭಾಷಣದಲ್ಲಿ ಶ್ರೀ ಸಭಾದ ಕಾರ್ಯ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ವೇದಿಕೆಯ ಮೇಲಿದ್ದ ಗಣ್ಯರನ್ನು ಹಾಗೂ ಸಭಿಕರೆಲ್ಲರನ್ನೂ ತುಂಬು ಹೃದಯದಿಂದ ಸ್ವಾಗತಿಸಿದರು. ಪ್ರೊ. ಕೆ. ರಾಮಮೂರ್ತಿ ರಾಯರು ಪದ್ಮಶ್ರೀ ಗೌರಿಶಂಕರರವರ ಕಾರ್ಯಚಟುವಟಿಕೆಗಳ ವಿಸ್ತಾರ, ಅವರ ಜನಪರ ಕಾರ್ಯಕ್ರಮಗಳು, ಶ್ರೀಮಠದಿಂದ ನಡೆಸುತ್ತಿರುವ ಅನ್ನದಾಸೋಹ, ಅಕ್ಷರದಾಸೋಹ, ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಹತ್ತು ಹಲವು ಕಾರ್ಯಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡದ್ದನ್ನು ತಿಳಿಸಿದರಲ್ಲದೆ ಪದ್ಮಶ್ರೀ ಪ್ರಶಸ್ತಿ ಇಂತವರಿಗೆ ಬಂದುದರಿಂದ ಆ ಪ್ರಶಸ್ತಿಯ ಮಹತ್ವ ಇನ್ನೂ ಹೆಚ್ಚಾಯಿತೆಂದು ಶ್ರೀಯುತರ ಕಿರುಪರಿಚಯ ಮಾಡಿದರು.

ಶ್ರೀಯುತರಿಗೆ ಶ್ರೀ ಸತ್ಯಶಂಕರ ಬೊಳ್ಳಾವೆಯವರು ರೇಷ್ಮೆಶಾಲನ್ನು ಹೊದಿಸಿ, ಗಂಧಹಾರ ಹಾಕಿ, ಫಲತಾಂಬೂಲಗಳನ್ನಿತ್ತು, ನಾಟ್ಯ ಸರಸ್ವತಿಯ ಪಂಚಲೋಹದ ಮೂರ್ತಿಯನ್ನು ನೆನಪಿನ ಕಾಣಿಕೆಯಾಗಿ ಕೊಟ್ಟು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಂಘದ ಪರವಾಗಿ ಸನ್ಮಾನ ಮಾಡಿದರು. ಸನ್ಮಾನಿತರು ಮಾತನಾಡಿ ಈ ಸನ್ಮಾನವೆಲ್ಲಾ ಶ್ರೀ ಮಠಕ್ಕೆ ಸೇರಿದುದು ಹಾಗೂ ನಿಮ್ಮೆಲ್ಲರಿಗೆ ಸೇರಿದ್ದು. ನಾನು ಬರೆ ನೆಪ ಮಾತ್ರ. ಶ್ರೀ ಆದಿಶಂಕರಾಚಾರ್ಯರಿಂದ ಹಿಡಿದು ಈಗಿನ ಗುರುಗಳವರೆಗೆ ಶ್ರೇಷ್ಠ ಪರಂಪರೆಯಿರುವ ಮಠದ ಸೇವಕ ನಾನು. ನನಗೆ ಸಂದ ಗೌರವವೆಲ್ಲ ಶ್ರೀ ಮಠದ್ದು ಎಂದು ಹೇಳಿ ಸನ್ಮಾನ ಮಾಡಿದ್ದಕ್ಕಾಗಿ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಮತ್ತು ಅದರ ಆಡಳಿತ ವರ್ಗ, ಗೌರವಾನ್ವಿತ ಸದಸ್ಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾವು ಹೊರತಂದಿರುವ ಪರಿಷ್ಕೃತ "ಬಂಧು ಬಳಗ" ಎಂಬ ಪುಸ್ತಕವನ್ನು ನಮ್ಮವರೇ ಆದ ಶ್ರೀ ಸತ್ಯಶಂಕರ್ ಬೊಳ್ಳಾವೆಯವರು ಬಿಡುಗಡೆ ಮಾಡಿದರು. ಶ್ರೀ ಕೆ. ರಘುರಾಮ ಸಭಾಪತಿ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಮೈಸೂರು ಶಾಖೆ ಇವರು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಹೊರತಂದ 2009ನೇ ಇಸವಿಯ ಕ್ಯಾಲೆಂಡರನ್ನು ಬಿಡುಗೊಡೆಗೊಳಿಸಿದರು. ಇದಾದ ಬಳಿಕ ಮೈಸೂರಿನ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳಾ ಶ್ರೀ ಹೆಚ್. ರಾಮಚಂದ್ರರವರು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮೈಸೂರು ಇದಕ್ಕೆ ಆರ್ಥಿಕವಾಗಿ ಸಹಾಯ ಮಾಡಿದ ನಮ್ಮ ಸಮಾಜ ಬಾಂಧವರಿಗೆ ನೆನಪಿನ ಕಾಣಿಕೆಗಳನ್ನು ಕೊಟ್ಟು ಸಹಕರಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಜ್ಞಾನಶಕ್ತಿ ಸಭೆಯ ಅಧ್ಯಕ್ಷರು ಆಗಿರುವ ಶ್ರೀ ಉಮೇಶ್ ರಾವ್ ಎರ್ಮಾಳು ಇವರು ಅಧ್ಯಕ್ಷೀಯ ಭಾಷಣದಲ್ಲಿ ತಾನು ಗೌರೀ ಶಂಕರರವರನ್ನು ಭೇಟಿ ಮಾಡಿದ ಸಂದರ್ಭ ಹಾಗೂ ಅವರ ಸರಳತೆ, ಸಜ್ಜನಿಕೆಗಳ ಬಗ್ಗೆ ಮಾತನಾಡಿ ವೇದಿಕೆ ಮೇಲಿದ್ದ ಗಣ್ಯರೆಲ್ಲರಿಗೂ ತಮ್ಮ ವೈಯಕ್ತಿಕ ವಂದನೆಗಳನ್ನು ಸಲ್ಲಿಸಿದರು. ಸಭಾ ಕಾರ್ಯದರ್ಶಿಗಳಾದ ಶ್ರೀ ಕೆ.ವಿ. ಗಣೇಶ ಅಧಿಕಾರಿಯವರು ನೆರೆದವರೆಲ್ಲರಿಗೂ ವಂದನಾರ್ಪಣೆ ಮಾಡಿದರು. ಪ್ರೊ ಕೆ. ರಾಮಮೂರ್ತಿರವರು ಕಾರ್ಯಕ್ರಮವನ್ನು ಸಂಯೋಜಿಸಿದರು. ಇದಾದ ನಂತರ ಸುಮಾರು ಒಂದು ಗಂಟೆಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಕೊನೆಯಲ್ಲಿ ಭೋಜನದ ವ್ಯವಸ್ಥೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

**ವರದಿ : ಉಮೇಶ್ ರಾವ್ ಎರ್ಮಾಳು**

# ಜೀರ್ಣೋದ್ಧಾರ –ನೆಲೆ, ಹಿನ್ನೆಲೆ

(ಹಿಂದಿನ ಸಂಚಿಕೆಯಿಂದ....)

ಶ್ರೀ ಮದ್ರತ್ನ ಕಿರೀಟ ಕುಂಡಲ ಯುಗಗ್ರೈವೇಯ........ ಅಂದರೆ ರತ್ನಕಿರೀಟ, ಮಕರ ಕುಂಡಲ, ಕಂಠಾಭರಣ, ತೋಳೊಡವೆ, ಕೈಕಡಗ, ಯಜ್ಞೋಪವೀತ, ಸೊಂಟಪಟ್ಟಿ, ಪೀತಾಂಬರ, ನೂಪುರ ಮುಂತಾದ ಆಭರಣಗಳನ್ನು ಆಯಾ ಮೂರ್ತಿಗೆ ಅನುರೂಪವಾಗಿ ರಚಿಸಬೇಕು.

ಆಯಾದೇವರ ಆಯುದಾದಿಗಳಿಂದ ಉಜ್ವಲವಾಗಿಯೂ, ಸೂಕ್ಷ್ಮವಾದ ಕುಸುರು ಕೆಲಸವುಳ್ಳದ್ದಾಗಿಯೂ, ಸುಂದರವಾಗಿ, ಶಾಸ್ತ್ರೀಯವಾಗಿಯೂ ಬಿಂಬವನ್ನು ರಚಿಸಬೇಕು. ದೇವಬಿಂಬದಲ್ಲಿ ಹಲವು ಭೇದಗಳಿವೆ ಅವು ಕ್ರಮವಾಗಿ- ಶೈಲೀದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ। ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ॥ – ಶಿಲೆ, ವೃಕ್ಷ, ಲೋಹ, ಲೇಪನ, ಲೇಖನ, ಮರಳು, ಮನೋಮಯಿ, ಮಣಿಮಯಿ ಎಂದು 8 ವಿಧವಾಗಿದೆ. ಇಂತಹ ಬಿಂಬಗಳಲ್ಲಿ ಕೆಲವೊಂದು ದೋಷಗಳನ್ನು ವಿಚಕ್ಷಣರು ಸೂಚಿಸಿರುತ್ತಾರೆ. ಕಾಲಾಂತರದಲ್ಲಿ ಈ ದೋಷಗಳು ಬಿಂಬದಲ್ಲಿ ಬರಬಹುದು. ಅವು- ಖಂಡಿತೇ ಸ್ಫುಟಿತೇ ದಗ್ಧೇ ಭಿನ್ನೇ ಮಾನವಿವರ್ಜಿತೇ ಹೀನಾಂಗೇ ವಾಧಿಕಾಂಗೇ ವಾ ಅಕಸ್ಮಾತ್ ಪತಿತೇಕ್ಷಿತೌ ॥ ಅನ್ಯ ಮಂತ್ರಾರ್ಜಿತೇವಾಪಿ ಪರ್ತಿಸ್ಪರ್ಶದೂಷಿತೇ ದಶಸ್ವೇತೇಷು ನೊ ಚಕ್ರುಃ ಸನ್ನಿಧಾನಂ ದಿವಸಃ ॥ -ಖಂಡಿತ, ಸ್ಫುಟಿಕ, ದಗ್ಧ, ಭಿನ್ನ, ಮಾನವರ್ಜಿತ, ಹೀನಾಂಗ, ಅಧಿಕಾಂಗ, ಪತಿತ, ಅನ್ಯ ಮಂತ್ರಾರ್ಜಿತ, ಪತಿತ್ಯ ಸ್ಪರ್ಶನಾದಿ ದೂಷಿತ – ಈ ದೋಷಗಳಲ್ಲಿ ಯಾವುದಾದರೂ ದೋಷ ಬಿಂಬದಲ್ಲಿದ್ದರೆ ದೇವರು ಸಾನಿಧ್ಯವನ್ನು ಸಹಿಸಲಾರ; ಹಾಗಾದರೆ ಬಿಂಬ ವಿಸರ್ಜನೀಯವೇ? ಅಥವಾ ಪೂಜಾ ಯೋಗ್ಯವೇ ಎಂಬ ಸಂದೇಹ ಬಂದಾಗ (ವಿಶೇಷವಾಗಿ ಭಗ್ನವಾದ ಬಿಂಬದಲ್ಲಿ ವಿಷಯದಲ್ಲಿ ಸಂದೇಹ ಬಂದಾಗ) ಹೀಗೆ ಹೇಳಲಾಗಿದೆ.- ಭಗ್ನೇಪಿ ದೇವಸಾನಿಧ್ಯಯುಕ್ತಂ ಬಿಂಬಂನ ತ್ಯುತ್ಯಜೇತ್ – ಬಿಂಬದಲ್ಲಿ ದೇವ ಸಾನಿಧ್ಯವಿದ್ದರೆ ಸ್ವಲ್ಪ ಭಿನ್ನತೆ ಬಂದರೂ ವಿಸರ್ಜಿಸಬೇಕಾಗಿಲ್ಲ, ಯಸ್ಮಿನ್ನಂಗೇ ಭಿನ್ನೇ ಮೃತೋಹಿ ಮರ್ತ್ಯೋ ಭವೇನ್ನೂನಮ್ ತಸ್ಮಿನ್ನಂಗೇ ಭಿನ್ನೇ ಬಿಂಬಸ್ಯ ವಿಸರ್ಜನಂ ಕುರ್ಯಾತ್ ॥ ಯಸ್ಮಿನ್ನಂಗೇ ಭಿನ್ನೇ ನಮೃತೋ ಭವತೀಹ ಭೂಮಿಷ್ಠಃ ತಸ್ಮಿನ್ನಂಗೇ ಭಿನ್ನೇ ಸುವರ್ಣ ಸೂತ್ರಾದಿಭಿರ್ಬಂಧಃ ॥ – ಯಾವ ಅಂಗವು ಭಿನ್ನವಾಗಿದ್ದರೆ ಮನುಷ್ಯನು ಬದುಕಲಾರನೋ ಅಂತೆಯೇ ದೇವತಾ ಶರೀರ ಭಾಗವು ಭಿನ್ನವಾಗಿದ್ದರೆ ಬಿಂಬವನ್ನು ವಿಸರ್ಜಿಸಬೇಕು. ಯಾವ ಅಂಗವು ಭಿನ್ನವಾದರೆ ಮನುಷ್ಯನನ್ನು ಪ್ರಯತ್ನಪಟು ಸರಿಮಾಡಬಹುದೋ ಆ ಅಂಗವು ಭಿನ್ನವಾಗಿದ್ದರೆ ಸುವರ್ಣ ಸೂತ್ರದಿಗಳಿಂದ ಬಂಧನಮಾಡಿ ಸರಿಪಡಿಸಬೇಕು. ಹಲವು ಜನರಲ್ಲಿ ಪ್ರಾಸಾದವೆಂಬ ದೇವಾಲಯದ ಅಂಗವು ನಮ್ಮ-ನಮಗಮ ಮನೆಗಳಿಗೆ ಇರುವ ಹೊರ ಆವರಣ ಇದ್ದಂತೆ ಎಂಬ ಕಲ್ಪನೆಯಿದೆ. ಇದು ಅಯುಕ್ತ. ಪ್ರಾಸಾದೋರ್ಚಾ ಚ ವಿಶ್ವೇಶಿತುರಿ ಹವಪುಷೀ ಸ್ಥೂಲ ಸೂಕ್ಷ್ಮೇ ಯತೋತೋ ತ್ರಾಧಾರಾದೇಯೇ ಭಾವಾದಿತರತರ ಭವೋನ್ಯತ್ರ ಚಾಭ್ಯೇತಿ ದೋಷಃ। ದೋಷೇತ್ವೇಕ ಸ್ಥಿತೇಪ್ರಾಚರತು ತದುಭಯೋಃ ಶೋಧನಂ ಸ್ಥಾನಸಂಸ್ಥೇ ತದ್ವತ್ತಚ್ಛೋಧನಾದ್ಯಂ ಯದಿನ ಪರಕೃತಾ ವಸುತೋಕ್ತಾ ಸ್ಥಲೇಲಮ್ ॥ – ಪ್ರಾಸಾದವು ದೇವರ ಸ್ಥೂಲ ಶರೀರವೆಂದೂ, ಬಿಂಬವೂ ಸೂಕ್ಷ್ಮ ಶರೀರವೆಂದೂ ತಿಳಿಯಲ್ಪಡುತ್ತದೆ.

ಇವುಗಳಿಗೆ ಪರಸ್ಪರ ಆಧಾರಾಧೇಯ ಭಾವವಿದೆ. ಆದ್ದರಿಂದ ಒಂದಕ್ಕೆ ಬಂದ ದೋಷ ಇನ್ನೊಂದನ್ನು ಸ್ಪರ್ಶಿಸುತ್ತದೆ ಎಂದು ತಿಳಿಯಬೇಕು. ಒಂದು ಕಡೆ ದೋಷ ಬಂದಲ್ಲಿ ಎರಡಕ್ಕೂ ಶುದ್ಧಿಯಾಗಬೇಕು. ಪ್ರತ್ಯೇಕವಾಗಿ ಸ್ಥಾನದಲ್ಲಿ ದೋಷವಿಲ್ಲದಿದ್ದರೆ ಅವಸ್ರುತ ಪ್ರೋಕ್ಷಣದಿಂದಲೇ ಎಲ್ಲಾ ಕಡೇ ಶುದ್ಧವಾಗುತ್ತದೆ. ಆದ್ದರಿಂದ, ಪ್ರಾಸಾದವು ಹೊರಆವರಣ(ಕಂಪೌಂಡ್) ಆಗಿರದೆ ದೇವರ ಸ್ಥೂಲ ಶರೀರ ಎನ್ನುವುದು ಸ್ಪಷ್ಟವಾಗುತ್ತದೆ. ನಿರ್ದೋಷೇ ಸಗುಣೇ ಮುಹೂರ್ತಸಮಯೇ ಪೂರ್ವಂ ಪ್ರತಿಷ್ಠಾತತಃ ಪೂಜಾ ಚಾನುದಿನಂ ಯಥಾವಿಧಿ ತಥಾ ಪ್ರತ್ಯಬ್ದ ಮಪ್ಯುತ್ಸವಃ। ದೋಷೇ ಸತ್ಯುದಿತಾ ಚ ನಿಷ್ಕೃತಿರಥೋ ಜೀರ್ಣ್ ಪುನರ್ಬಂಬಯೋಃ ಜೀರ್ಣೋದ್ಧಾರವಿಧಿಶ್ಚ ಸತ್ವರಮಮಿ ಸಾನಿಧ್ಯ ಸಂಪತ್ತ್ಯದಾಃ ॥ –ದೋಷರಹಿತವಾದ ಗುಣಪೂರ್ಣವಾದ ಮುಹೂರ್ತದಲ್ಲಿ ಮೊದಲು ಪ್ರತಿಷ್ಠೆಯಾಗಬೇಕು. ಅನಂತರ ಪ್ರತಿ ದಿವಸ ವಿಧಿಗನುಸಾರವಾಗಿ ಪೂಜೆಯಾಗಬೇಕು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

# ಆತ್ಮಜ್ಞಾನಿ ಜಡಭರತ ಋಷಿ (ಪೌರಾಣಿಕ ಕಥೆ)

(ಹಿಂದಿನ ಸಂಚಿಕೆಯಿಂದ....)

ಲೇಖಕ : ವೈ. ಶಂಕರನಾರಾಯಣ ರಾವ್

ಅವನ ಜಡೆಗಟ್ಟಿದ ತಲೆ, ಹರಕು ಬಟ್ಟೆ, ಕೊಳೆತುಂಬಿದ ಕಪ್ಪುಗಟ್ಟಿದ ಜನಿವಾರ ಇವು ಜನರ ಹಾಸ್ಯದ ವಸ್ತುಗಳಾಗಿ ಜನ ಅವನನ್ನು ''ಹುಚ್ಚು ಬ್ರಾಹ್ಮಣ'' ''ಜಡಭರತ'' ಎಂದು ಗೇಲಿ ಮಾಡುವರು. ಅವನಿಂದ ಬಿಟ್ಟಿ ಕೆಲಸ ದುಡಿಸಿಕೊಳ್ಳುವರು. ಅವನ ಅಣ್ಣಂದಿರೂ ಅವನಿಂದ ತಮ್ಮ ಗದ್ದೆಯ ಕೆಲಸಗಳನ್ನು ಮಾಡಿಸಿ ಅವನಿಗೆ ಗಂಜಿಯ ತೆಳಿಯನ್ನೋ, ತೌಡು – ಹಿಂಡಿಗಳನ್ನೂ ತಿನ್ನಲು ಕೊಡುತ್ತಿದ್ದರು.

ಅವನು ಹೀಗೆ ಆತ್ಮಾನಂದ, ಆತ್ಮಾನುಭೂತಿಗಳಿಂದ ನಿರ್ಲಿಪ್ತನಾಗಿ ಜೀವಿಸುತ್ತಿರಲು ಒಂದು ದಿನ ಕಳ್ಳರ ಪಡೆಯೊಂದು ಅವನನ್ನು ಕಂಡು ದೇವಿ ಮಹಾಕಾಳಿಗೆ ಬಲಿ ಕೊಡಲೆಂದು ಅವನನ್ನು ಅಪಹರಿಸಿತು. ಅವನಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ಉಡಿಸಿ ಸಿಂಗರಿಸಿ ಮೃಷ್ಟಾನ್ನವನ್ನು ಉಣಿಸಿದರು. ಹಲವು ಪೂಜಾವಿಧಿಗಳ ಬಳಿಕ ಅವನನ್ನು ಬಲಿಕೊಡಲೆಂದು ಬಲಿಪೀಠದಲ್ಲಿ ಕುಳ್ಳಿರಿಸಿ ಕತ್ತಿಯನ್ನು ಮೇಲೆತ್ತಲು ಭಯಂಕರ ಸಿಡಿಲಿನ ಶಬ್ದದೊಂದಿಗೆ ಘೋರರೂಪಿಣಿಯಾದ ಭದ್ರಕಾಳಿಯು ವಿಗ್ರಹವನ್ನೊಡೆದು ಕಾಣಿಸಿಕೊಂಡಳು. ಜಗತ್ತು ಕಂಪಿಸುವಂತೆ ಆಕೆ ಗರ್ಜಿಸುತ್ತಾ ಕಳ್ಳರನ್ನು ತರಿದು ಹಾಕಿ ತನ್ನ ಪರಿವಾರದೊಂದಿಗೆ ಅವರ ನೆತ್ತರನ್ನು ಕುಡಿದು ರುಂಡಗಳನ್ನು ಚೆಂಡಾಡಿದಳು. ಈ ಎಲ್ಲಾ ರಣರಂಪಗಳಿಗೂ ತನಗೂ ಏನೂ ಸಂಬಂಧವಿಲ್ಲದಂತೆ ತಣ್ಣಗೆ ಇದ್ದ ಜಡಭರತನು ತನ್ನ ಕಾರ್ಯಕ್ಷೇತ್ರಕ್ಕೆ ಹಿಂತಿರುಗಿ ಎಂದಿನ ದಿನಚರಿಯಲ್ಲಿ ಮಗ್ನನಾದನು.

ಆದೊಂದು ದಿನ ಸೌವೀರ ದೇಶದ ರಾಜನಾದ ರಹೂಗಣ ಎಂಬವನು ಕಪಿಲಮುನಿಯಿಂದ ತತ್ವೋಪದೇಶವನ್ನು ಪಡೆಯಲೆಂದು ಪಲ್ಲಕ್ಕಿಯಲ್ಲಿ ಕುಳಿತು ಇಕ್ಷುಮತೀ ನದೀ ತೀರದಲ್ಲಿ ಬರುತ್ತಿದ್ದನು. ಅಲ್ಲಿ ಧ್ಯಾನ ಪರನಾಗಿ ಕುಳಿತಿರುವ ಜಡಭರತ ಋಷಿಯನ್ನು ಕಂಡು ಬೋಯಿಗಳ ನಾಯಕನು ಪಲ್ಲಕ್ಕಿಯನ್ನು ಹೊರಲು ಇನ್ನೊಬ್ಬ ದಾಂಡಿಗನು ಸಿಕ್ಕಿದನೆಂದು ಆನಂದ ಹೊಂದಿದವನಾದನು. ಅವನನ್ನು ಎಳೆದು ತಂದು ಪಲ್ಲಕ್ಕಿಯನ್ನು ಹೆಗಲ ಮೇಲೆ ಹೇರಿದಾಗ ಅಭ್ಯಾಸವಿಲ್ಲದೆ ನಡೆಯುವಾಗ ಅವನಿಗೆ ಇತರರೊಡನೆ ಸಮತೋಲನ ಸಾಧಿಸಲಾಗದೆ ಪಲ್ಲಕ್ಕಿ ಕುಲುಕಾಡಲು ಪ್ರಾರಂಭಿಸಿತು. ಕೋಪಾವೇಶದಿಂದ ರಾಜನು ಜಡಭರತನನ್ನು ಮೂದಲಿಸುತ್ತಾ ಅವನಿಗೆ ಕಠಿಣ ಶಿಕ್ಷೆಯನ್ನು ಕೊಡುವುದಾಗಿ ಎಚ್ಚರಿಸಿದನು. ಜಡಭರತನು ವಿಚಲಿತನಾಗದೆ ಮುಗುಳ್ನಗುತ್ತಾ ಮಧುರವಾಗಿ ''ಅಯ್ಯಾ, ನಾನು ನಿನ್ನ ಪಲ್ಲಕ್ಕಿಯನ್ನು ಹೊತ್ತವನೂ ಅಲ್ಲ, ನಡೆದವನೂ ಅಲ್ಲ, ಬಳಲಿದವನೂ ಅಲ್ಲ. ಅವೆಲ್ಲ ದೇಹಕ್ಕೆ ಸಂಬಂಧಿಸಿದ್ದೇ ವಿನಹ ನಾನೆಂಬ ಆತ್ಮನಿಗಲ್ಲ. ಎರಡು ದಿನಗಳ ಬಾಳುವೆಯನ್ನು ಹೊಂದಿರುವ ನೀನು ರಾಜನೂ ಅಲ್ಲ; ನಾನು ಆಳೂ ಅಲ್ಲ. ಇದು ಅದಲು ಬದಲೂ ಆಗಬಹುದು. ಆದರೆ ಆತ್ಮದ ಸ್ವರೂಪವನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ನೀನು ಶಿಕ್ಷಿಸುವುದಾದರೆ ಈ ದೇಹವನ್ನು ತಾನೇ? ಆತ್ಮಾನುಭೂತಿಯಿಂದ ಬ್ರಹ್ಮಾನಂದವನ್ನು ಅನುಭವಿಸುತ್ತಿರುವ ನಾನು ನಿನ್ನ ಶಿಕ್ಷೆಗೆ ಹೆದರುವನೇ?'' ಎಂದು ಹೇಳಿದನು.

ಅಷ್ಟರಲ್ಲಿ ರಹೂಗಣನು ಪಲ್ಲಕ್ಕಿಯಿಂದ ಕೆಳಗಿಳಿದು ಭಯದಿಂದ ನಡುಗುತ್ತಾ ಜಡಭರತನ ಪಾದಗಳಿಗೆ ಎರಗಿ ''ಮಹಾತ್ಮಾ, ನೀನು ಧರಿಸಿರುವ ಜನಿವಾರದಿಂದ ನೀನು ಬ್ರಾಹ್ಮಣನೆಂದು ನನಗೆ ತಿಳಿಯಿತು. ಬ್ರಹ್ಮಜ್ಞಾನಿಯಾದ ಬ್ರಾಹ್ಮಣನಿಗೆ ನಾನು ಅಂಜುತ್ತೇನೆ. ನೀನು ಯಾರೇ ಆಗಿರು, ಬ್ರಹ್ಮಜ್ಞಾನಿಯಾಗಿರುವುದಂತೂ ನಿಜ. ದಯವಿಟ್ಟು ನನ್ನ ಸಂದೇಹಗಳನ್ನು ಹೋಗಲಾಡಿಸು'' ಎಂದು ನುಡಿದು ತನ್ನ ಸಂದೇಹಗಳನ್ನು ಈ ರೀತಿಯಾಗಿ ಮಂಡಿಸಿದನು.


''ಪಾಯಸ ಮಾಡುವಾಗ ಮೊದಲು ಪಾತ್ರೆ ಬಿಸಿಯಾಗಿ ಆ ಮೇಲೆ ಹಾಲು ಕಾದು ಬೇಳೆಬೆಂದು ಬೆಲ್ಲ ಕರಗುವಂತೆ ದೇಹ, ಇಂದ್ರಿಯ, ಪ್ರಾಣ ಮನಸ್ಸುಗಳಿಗೆ ಸುಖದುಃಖಗಳು ವ್ಯಾಪಿಸಿ ಕೊನೆಗೆ ಆತ್ಮಕ್ಕೂ ತಾಗುತ್ತದೆ. ಹೀಗಿರುವಾಗ ದೇಹಧಾರಿಯಾದ ನಿಮ್ಮ ಆತ್ಮಕ್ಕೆ ಪಲ್ಲಕ್ಕಿ ಹೊರುವಾಗ ಆಯಾಸ ಆಗದೆ ಇರುವುದೆಂತು? ರಾಜ್ಯ ಆಳುವವನು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಕಾಪಾಡಬೇಕು. ಇದು ಭಗವಂತನ ಕಟ್ಟಳೆಯಾಗಿರುವಾಗ ಸ್ವಾಮಿ-ಸೇವಕ ಎಂಬ ವ್ಯತ್ಯಾಸ ಇರಲೇಬೇಕಲ್ಲವೇ?'' ಎಂದನು.

ಆಗ ಜಡಭರತ ಮುನಿಯು ಉತ್ತರಿಸುತ್ತಾ ''ಅಯ್ಯಾ, ನೀನು ಅಜ್ಞಾನಿಯಂತೆ ಮಾತನಾಡುತ್ತಿರುವೆ. ಪಾತ್ರೆ, ಹಾಲು, ಬೇಳೆ, ಬೆಲ್ಲಗಳು ಕಾವು ವ್ಯಾಪಿಸುವ ಒಂದೇ ಜಾತಿಗೆ ಸೇರಿದವಾದುದರಿಂದ ಒಂದರಿನ್ನೊಂದಕ್ಕೆ ವ್ಯಾಪಿಸಿ ಪಾಯಸವಾಗುತ್ತದೆ. ಆದರೆ ದೇಹ, ಇಂದ್ರಿಯ, ಮನಸ್ಸು ಇವುಗಳ ಸಾಲಿಗೆ ಆತ್ಮವು ಸೇರಿದುದಲ್ಲ. ಇಂದ್ರಿಯಗಳ ನೋವು ಆತ್ಮಕ್ಕೆ ವ್ಯಾಪಿಸುವಂತಿದ್ದರೆ ಅದು ಆತ್ಮವೇ ಅಲ್ಲ. ದುಃಖಕ್ಕೆ ಮೂಲಕಾರಣ ಅಭಿಮಾನರೂಪಿಯಾದ ಮಾಯೆ. ವಿಷಯ ವಸ್ತುಗಳ ಮೇಲೆ ಉಂಟಾಗುವ ಮೋಹ ಮಾಯೆಗಳಿಂದ ಸುಖದುಃಖಗಳು ಕಾಡುತ್ತವೆ. ನಿಗಿನಿಗಿ ಹೊಳೆಯುವ ಕೆಂಡಕ್ಕೆ ಹೊಗೆ ಎಲ್ಲಿಯದು? ಅಂತೆಯೇ ವಿಷಯಾಸಕ್ತಿಗಳನ್ನು ತ್ಯಜಿಸಿದ ಆತ್ಮಾನುಶಕ್ತಿಗೆ ಸುಖವೂ ಇಲ್ಲ, ದುಃಖವೂ ಇಲ್ಲ. ಇನ್ನು ನಿನ್ನ ಎರಡನೆಯ ಪ್ರಶ್ನೆ. ಅಹಂಕಾರದಿಂದ ಕೂಡಿದ ನಿನ್ನದು ಎಂತಹ ರಾಜಧರ್ಮ? ದೇಹಾತ್ಮ ಭಾವನೆಯಿಂದ ರಾಜತ್ವವನ್ನು ನಿನ್ನಲ್ಲಿ ಆರೋಪಿಸಿಕೊಂಡು ಬಡ ಬೆಸ್ತರಿಂದ ಬಿಟ್ಟಿಯಾಗಿ ಪಲ್ಲಕ್ಕಿಯನ್ನು ಹೊರಿಸಿಕೊಂಡಿರುವೆ. ಪ್ರಜೆಗಳನ್ನು ಗೋಳಾಡಿಸಿ ಅವರನ್ನು ಶೋಷಿಸುತ್ತಿರುವ ನಿನ್ನ ಈ ರೀತಿಯು ಆತ್ಮ ಸ್ವರೂಪವನ್ನು ಅರಿಯದ ಅಜ್ಞಾನಿಗಳ ಲಕ್ಷಣ. ಆತ್ಮಜ್ಞಾನ ಸುಲಭ ಸಾಧನವಲ್ಲ, ಮಹಾತ್ಮರ ಸೇವೆಯನ್ನು ಮಾಡಿ ಅದನ್ನು ಪಡೆಯಬೇಕು.'' ಎಂದು ಇತ್ಯಾದಿಯಾಗಿ ತತ್ವೋಪದೇಶಗಳನ್ನು ಮಾಡಿದನು. ತನ್ನ ಪೂರ್ವಜನ್ಮಗಳ ವೃತ್ತಾಂತವನ್ನು ಹೇಳಿ ತಾನು ಈ ಜನ್ಮದಲ್ಲಿ ಜಡಭರಿತನಾಗಿ ಇದ್ದು ಯಾರ ಸಹವಾಸವನ್ನೂ ಮಾಡದೆ ಇರುವ ಕಾರಣವನ್ನು ತಿಳಿಸಿದನು.

ಜಡಭರಿತ ಋಷಿಯ ಮಾತುಗಳಿಂದ ರಹೂಗಣನ ಅಜ್ಞಾನ ನೀಗಿ ಅವನ ದೇಹಾಭಿಮಾನ ಕರಗಿ ಹೋಯಿತು. ರಾಜನು ತಾಮಸವನ್ನು ಕಳೆದುಕೊಂಡವನಾಗಿ ಆ ಪರಮಹಂಸನಿಗೆ ನಮಿಸಿ ತನ್ನ ಪಯಣವನ್ನು ಮುಂದುವರೆಸಿದನು. ಜಡಭರಿತ ಋಷಿಯು ಬಹುಕಾಲ ಬಾಳಿ ಮುಂದೆ ಕಾಲ ಕೂಡಿ ಬರಲು ಹರಿಪದ ಸಾಯುಜ್ಯವನ್ನು ಪಡೆದನು.

(ಆಧಾರ ಗ್ರಂಥ :–ಶ್ರೀ ತ.ಸು. ಶಾಮರಾಯರ ''ವಚನ ಭಾಗವತ'')

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಇದರ ಸರ್ವಸದಸ್ಯರ ಮಹಾಸಭೆ ಹಾಗೂ ವಾರ್ಷಿಕೋತ್ಸವ



ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಇದರ ಸರ್ವಸದಸ್ಯರ ಮಹಾಸಭೆ ಹಾಗೂ ವಾರ್ಷಿಕೋತ್ಸವವು ತಾ.25-12-2008ನೇ ಗುರುವಾರ ಶ್ರೀ ಸುಬ್ರಹ್ಮಣ್ಯ ಸಭೆಯಲ್ಲಿ ಜರಗಿತು.

ಲಲಿತಾ ಸಹಸ್ರನಾಮ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ, ಸಾಮೂಹಿಕ ಸತ್ಯನಾರಾಯಣ ಪೂಜೆಗಳನಂತರ ಬಿ.ಕೆ. ಮಾಧವರಾಯರ ಪ್ರಾಯೋಜಕತ್ವದಲ್ಲಿ ಶ್ರೀಮದ್ ಭಗವದ್ಗೀತೆಯ 15ನೇ ಅಧ್ಯಾಯದ ಕಂಠಪಾಠ ಸ್ಪರ್ಧೆ ನಡೆಯಿತು. ಸ್ತ್ರೀಯರು, ಪುರುಷರು ಮತ್ತು ಮಕ್ಕಳೂ ಈ ಸ್ಪರ್ಧೆಯಲ್ಲಿ ಪಾಲ್ಗೊಂಡರು. ನಂತರ ಮನೆಯಲ್ಲೇ ತಯಾರಿಸಿ ತಂದ ಸಿಹಿ ಹಾಗೂ ಖಾರ ತಿಂಡಿಗಳ ಅಡುಗೆ ಸ್ಪರ್ಧೆ ನಡೆಯಿತು.

ಆಡಳಿತ ವರದಿಯ ಮಂಡನೆ, ಲೆಕ್ಕ ಪತ್ರದ ಮಂಡನೆ – ಅನುಮೋದನೆ, ಅಡಿಟ್ ವರದಿಯ ಅಂಗೀಕಾರ ಹೀಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಮಹಾಸಭೆ ಯಶಸ್ವಿಯಾಗಿ ಪೂರ್ಣಗೊಂಡಿತು.

ಕರ್ನಾಟಕ ಚಿನ್ಮಯ ಮಿಶನ್‌ನ ಮುಖ್ಯಸ್ಥರಾದ ಪರಮಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತಿಸ್ವಾಮಿಯವರನ್ನು ಬಹು ಭಕ್ತಿಯಿಂದ ಪೂರ್ಣಕುಂಭ ಸ್ವಾಗತ ನೀಡಿ ಮಂತ್ರಘೋಷಗಳೊಂದಿಗೆ ಸಭೆಗೆ ಬರಮಾಡಿಕೊಳ್ಳಲಾಯಿತು.

ಪರಮಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತಿಯವರು ಆಶೀರ್ವಚನ ನೀಡಿ "ಆಚಾರ್ಯ ಶಂಕರರಿಂದ ಪುನರುತ್ಥಾನಗೊಂಡ ಹಿಂದೂ ಧರ್ಮ ಅತ್ಯಂತ ಸನಾತನವಾದದ್ದು, ಉಳಿದ ಯಾವುದೇ ಮತಗಳ ಹುಟ್ಟು ಯಾರಿಂದ, ಯಾವಾಗ ಎನ್ನುವುದು ನಿಖರವಾಗಿ ತಿಳಿಯಬಹುದು ಆದರೆ ನಮ್ಮ ಸನಾತನ ಧರ್ಮದ ಅಡಿಗಲ್ಲುಗಳಾಗಿ ಇರುವ ವೇದಗಳು ಯಾವಾಗ ಸೃಷ್ಟಿಸಲ್ಪಟ್ಟವು ಎಂಬುದು ಯಾರೂ ತಿಳಿದವರಲ್ಲ. ಬೈಬಲ್, ಕುರಾನ್, ಗುರುಗ್ರಂಥ ಸಾಹೇಬ್ ಹೀಗೆ ಧರ್ಮಗ್ರಂಥಗಳನ್ನು ಬರೆದವರು ಯಾರೆಂದು ನಾವು ಬಲ್ಲೆವಾದರೂ ನಮ್ಮ ವೇದಗಳನ್ನು ಬರೆದವರು ಯಾರು ಎಂಬುದು ನಿಗೂಢವಾಗಿಯೇ ಇದೆ. ವೇದಗಳಾದರೋ ಮನುಷ್ಯನ ಬುದ್ಧಿಗೆ ನಿಲುಕದೆ ಇರುವ ವಿಚಾರಗಳನ್ನು ಪ್ರತಿಪಾದಿಸುತ್ತವೆ. ಯಜ್ಞೋಪವೀತದ ಮೂರು ಎಳೆಗಳು ನಮ್ಮಲ್ಲಿ ಪಿತೃಋಣ, ಋಷಿಋಣ, ದೇವಋಣಗಳನ್ನು ನಮಗೆ ನೆನಪಿಸುವ ಸಂಕೇತಗಳು. ಇದನ್ನು ಮರೆಯದೆ ಋಣತ್ರಯಗಳನ್ನು ತೀರಿಸಲು ಸದಾ ಸನ್ನದ್ಧರಾಗಬೇಕು'' ಎಂದರು. ಮನಸ್ಸು ಬುದ್ಧಿಗಳ ಮೇಲೆ ಹಿಡಿತ ಸಾಧಿಸಲು ಸಹಾಯಕವಾಗುವ ಜಪ, ಧ್ಯಾನ, ಭಜನೆಗಳನ್ನು ಬಿಡಬಾರದು ಎಂದರು. ಸತ್ಯನಾರಾಯಣ ಪೂಜಾ ಮಂಗಳಾರತಿಯ ನಂತರ ಪ್ರಸಾದ ವಿತರಣೆ ಹಾಗೂ ಪ್ರಸಾದ ಭೋಜನ ನಡೆಯಿತು. ಶ್ರೀ ಪಲಿಮಾರು ಸಂಜಯ ಕುಮಾರರಿಂದ ಪ್ರಸ್ತುತವಾದ ಸಂಸ್ಕೃತ ಒಗಟುಗಳ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಿ ಶ್ರೀಮತಿ ಅನುರಾಧ ರಾವ್ ಸಂಯೋಜಿಸಿದ ವಿವಿಧ ನೃತ್ಯಗಳು ಪ್ರಸ್ತುತಗೊಂಡವು. ಈ ನೃತ್ಯಗಳಲ್ಲಿ ಸ್ತ್ರೀಯರು, ಪುರುಷರು ಮತ್ತು ಬಾಲಕ-ಬಾಲಕಿಯರು ಪಾಲ್ಗೊಂಡರು. ಬಳಿಕ ಪಲಿಮಾರು ಸಂಜಯಕುಮಾರ್‌ರ ಸಂಯೋಜಕತ್ವದಲ್ಲಿ ರಾಜಸೂಯಾಧ್ವರ ಎಂಬ ತಾಳಮದ್ದಳೆ ಪ್ರಸ್ತುತಗೊಂಡಿತು.

ಹಿಮ್ಮೇಳದಲ್ಲಿ ಶ್ರೀ ಸುಬ್ರಹ್ಮಣ್ಯ ಒಡ್ಡೂರು, ಶ್ರೀ ಕೃಷ್ಣರಾಜ ಭಟ್, ಶ್ರೀ ಗಣಪತಿ ಭಟ್, ಅರ್ಥಧಾರಿಗಳಾಗಿ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಶಾರದಾ ಪ್ರಸಾದ್, ಶ್ರೀಮತಿ ಸಾಧನಾ ಪ್ರತಾಪ್, ಶ್ರೀಮತಿ ಅರುಣ ಸೋಮಶೇಖರ ಶ್ರೀ ಸಂಜಯ ಕುಮಾರ್ ರಾವ್, ಶ್ರೀ ನಾಗರಾಜ ರಾವ್, ಶ್ರೀ ಉದಯ್‌ಕುಮಾರ್ ಸಹಕರಿಸಿದರು.

ಬಹುಮಾನ ವಿತರಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಾರ್ಥಕವಾಗಿ ಸಮಾಪನಗೊಂಡಿತು.

## ವೇದವೇದಾಂಗಗಳೆಂದರೇನು?

**ಛಂದಸ್ಸು**

ಹೆಚ್ಚಿನ ವೇದ ಮಂತ್ರಗಳು ಛಂದೋಬದ್ಧವಾಗಿವೆ. ಅರ್ಥಾತ್ ಮಂತ್ರಗಳನ್ನು ಒಂದು ಶಿಸ್ತುಬದ್ಧ ಚೌಕಟ್ಟಿನಕಲ್ಲಿ ಹಿಡಿದಿಡಲಾಗಿದೆ. ಅದಕ್ಕೇಯಾಸ್ಕರು ತಮ್ಮ ನಿರುಕ್ತದಲ್ಲಿ ‘ಛಂದಾಂಸಿ ಛಾದನಾತ್’ ಎಂದು ಛಂದಃಶಬ್ದದ ನಿರ್ವಚನ ಮಾಡಿದ್ದಾರೆ.

ಮಾತನ್ನು ಸ್ವೇಚ್ಛೆಯಿಂದ ಯಾವುದೇ ನಿಯಮಕ್ಕೊಳಪಡದೆ ಆಡಿದಾಗ ಅದು ಗದ್ಯವಾಗುತ್ತದೆ. ಅದನ್ನೇ ಛಂದೋನಿಯಮಕ್ಕೊಳಪಡಿಸಿದಾಗ ಪದ್ಯವಾಗುತ್ತದೆ. ಪದ್ಯ ಲಯಪ್ರಧಾನವಾಗಿದ್ದು ಹಾಡಲು ಅನುಕೂಲವಾಗಿರುತ್ತದೆ. ಪದ್ಯವನ್ನು ನೆನಪಿಟ್ಟುಕೊಳ್ಳುವುದು ಸುಲಭ ಅದು ತಾನಾಗಿಯೇ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ.

ಗದ್ಯಕ್ಕಿಂತ ಪದ್ಯರಚನೆ ಕಠಿಣ. ಪ್ರತಿಭೆ, ಪಾಂಡಿತ್ಯಗಳು ಇಲ್ಲಿ ಮೇಳೈಸಿದ್ದರೆ ಪದ್ಯದ ಮೂಲಕ ಕಾವ್ಯವನ್ನು ರಚಿಸಬಹುದು. ‘ಪದ್ಯಂ ವಧ್ಯಂ, ಗದ್ಯಂ ಹೃದ್ಯಂ’ ಎಂದು ಮುದ್ದಣ ಹೇಳಿದ್ದು ಗದ್ಯ ಪಕ್ಷಪಾತದ ಮಾತು ಅಷ್ಟೆ ಇರಲಿ.

ಲಿಪಿಗಳಿಲ್ಲದ ಕಾಲದಲ್ಲಿ ಕಾಣಿಸಿಕೊಂಡ ವೇದಗಳು ಸ್ವಾಭಾವಿಕವಾಗಿಯೇ ಪದ್ಯರೂಪದಲ್ಲಿದ್ದದ್ದು ಅಚ್ಚರಿಯಲ್ಲ. ಯಜುರ್ವೇದವೊಂದೇ ಗದ್ಯ ಭೂಯಿಷ್ಠವಾಗಿ ಆವಿರ್ಭವಿಸಿದ್ದು ವಿಶೇಷ ಸ್ವಲ್ಪಮಟ್ಟಿಗೆ ಅಥರ್ವವೂ ಗದ್ಯರೂಪದಲ್ಲಿದೆ. ಪದ್ಯಗಳು ಛಂದೋಬದ್ಧ. ಆದರೆ ಛಂದೋವೈವಿಧ್ಯದಿಂದ ಪದ್ಯವೈವಿಧ್ಯಗಳು ಉಂಟಾದುದು ಸಹಜವೇ. ಈ ವಿವಿಧ ಛಂಧಸ್ಸುಗಳು, ಅವುಗಳ ನಿಯಮಗಳು ಛಂದಶಾಸ್ತ್ರದಲ್ಲಿ ನಿರೂಪಿತವಾಗಿವೆ.

ಛಂದಸ್ಸು ಲೌಕಿಕ ಮತ್ತು ವೈದಿಕ ಎಂದು ಎರಡು ಬಗೆ. ಲೌಕಿಕ ಪದ್ಯಗಳಿಗಾಗಿ ಇರುವ ಛಂದಸ್ಸು ಲೌಕಿಕ. ವೈದಿಕ ಮಂತ್ರಗಳಿಗಾಗಿಯೇ ಇರುವ ಛಂದಸ್ಸುಗಳು ವೈದಿಕ ಛಂದಸ್ಸುಗಳು

ಪಿಂಗಳಾಚಾರ್ಯರೆಂಬವರ ‘ಛಂದಸ್ಸು’ಗಳೇ ಛಂದಶಾಸ್ತ್ರದ ಪ್ರಾಚೀನತಮಗ್ರಂಥ. ಸೂತ್ರರೂಪದದಲ್ಲಿರುವ ಈ ಗ್ರಂಥದಲ್ಲಿ ಎಂಟು ಅಧ್ಯಾಯಗಳಿವೆ. ಇದರಲ್ಲಿ ಎರಡೂ ಬಗೆಯ ಛಂದಸ್ಸುಗಳ ವಿವರಣೆ ದೊರೆಯುತ್ತದೆ. ವಿವರಣೆ ಎಂದರೆ ಲಕ್ಷಣ-ಲಕ್ಷ್ಯಗಳ ನಿರೂಪಣೆ.

ಛಂದಸ್ಸುಗಳಿಗೆ ಪ್ರಧಾನವಾಗಿ ನಾಲ್ಕು ಪಾದಗಳು. ಒಂದೊಂದು ಪಾದದಲ್ಲಿ ಇಂತಿಷ್ಟೇ ಅಕ್ಷರಗಳಿರಬೇಕೆಂಬ ನಿಯಮವಿದೆ. ಆದರೆ ವೈದಿಕ ಛಂದಸ್ಸುಗಳು ಇಂತಹ ನಿಯಮಗಳನ್ನು ಉಲ್ಲಂಘಿಸುತ್ತವೆ. ಎರಡು ಪಾದಗಳ ಛಂದಸ್ಸುಗಳು, ಮೂರು ಪಾದಗಳ ಛಂದಸ್ಸುಗಳು ವೇದಗಳಲ್ಲಿವೆ. ಮೂರು ಪಾದಗಳ ಛಂದಸ್ಸುಗಳೇ ಹೆಚ್ಚು. ಐದುಪಾದಗಳ ಛಂದಸ್ಸುಗಳೂ ಇಲ್ಲಿವೆ.

ಮುಖ್ಯವಾದ ಕೆಲವು ವೈದಿಕಛಂದಸ್ಸುಗಳ ಪಟ್ಟಿಯನ್ನಿಲ್ಲಿ ಕೊಡಲಾಗಿದೆ.

| ಛಂದಸ್ಸು | ಪಾದಗಳು | ಅಕ್ಷರಗಳು |
|---|---|---|
| ಗಾಯತ್ರಿ | ೩ | ೮+೮+೮=೨೪ |
| ಉಷ್ಣಿಕ್ | ೩ | ೮+೮+೧೨=೨೮ |
| ಪುರಉಷ್ಣಿಕ್ | ೩ | ೧೨+೮+೮=೨೮ |
| ಕಕುಭ್ | ೩ | ೮+೧೨+೮=೨೮ |
| ಅನುಷ್ಟುಭ್ | ೪ | ೮+೮+೮+೮=೩೨ |
| ಬೃಹತೀ | ೪ | ೯+೯+೯+೯=೩೬ |
| ಸತೋಬೃಹತೀ | ೪ | ೧೦+೧೦+೧೦+೧೦=೪೦ |
| ಪಙ್ತಿ | ೫ | ೮+೮+೮+೮+೮=೪೦ |
| ಪ್ರಸ್ತಾರಪಙ್ತಿ | ೪ | ೧೨+೧೨+೮+೮=೪೦ |
| ತ್ರಿಷ್ಟುಭ್ | ೪ | ೧೧+೧೧+೧೧+೧೧=೪೪ |
| ಜಗತೀ | ೪ | ೧೨+೧೨+೧೨+೧೨=೪೮ |

(...2ನೇ ಪುಟದಿಂದ)

ಈ ಛಂದಸ್ಸುಗಳಲ್ಲಿ ಅವಾಂತರ ಭೇದಗಳಿಲ್ಲದಿಲ್ಲ. ಉದಾಹರಣೆಗೆ ಗಾಯತ್ರಿ. ಇದರಲ್ಲಿ ಒಂದಕ್ಷರ ಕಡಿಮೆ ಇದ್ದರೆ ಅದನ್ನು ‘ನಿಚೃದ್’ ಎಂದು ಒಂದು ಅಕ್ಷರ ಹೆಚ್ಚಿದ್ದರೆ ‘ಭೂರಿಕ್’ ಎಂದೂ ಹೇಳುತ್ತಾರೆ. ಹಾಗೆ ಎರಡು ಅಕ್ಷರಗಳು ಕಮ್ಮಿಯಿದ್ದರೆ ‘ವಿರಾಟ್’ ಎಂದೂ, ಎರಡು ಅಕ್ಷರಗಳು ಜಾಸ್ತಿಯಿದ್ದರೆ ‘ಸ್ವರಾಟ್’ಎಂದೂ ಹೇಳುತ್ತಾರೆ.

ಈ ಛಂದಸ್ಸು ವೇದಮಂತ್ರಗಳನ್ನು ಸರಿಯಾಗಿ ಪಠಿಸಲು ಸಹಾಯಕವಾಗಿರುವುದರಿಂದ ಇದು ವೇದಾಂಗವಾಗಿದೆ. ಇದರಲ್ಲಿ ಗೇಯತೆ ಇರುವುದರಿಂದ ದೇವತೆಗಳು ಸ್ತುತಿಗಳಿಂದ ಕ್ಷಿಪ್ರ ಪ್ರಸನ್ನರಾಗುತ್ತಾರೆ. ಇದೇ ಛಂದಸ್ಸಿನ ಪ್ರಯೋಜನ.

**ನಿರುಕ್ತ**

ವೇದದಲ್ಲಿ ಬರುವ ಕಠಿಣ ಪದಗಳ ಸಂಗ್ರಹ ಮೊದಲಾಯಿತು. ಈ ಸಂಗ್ರಹಗ್ರಂಥಕ್ಕೆ ನಿಘಂಟು ಎಂದು ಹೆಸರು. ನಿಘಂಟು ಐದು ಅಧ್ಯಾಯಗಳ ಗ್ರಂಥ. ಇದರ ಮೊದಲನೆಯ ಮೂರು ಅಧ್ಯಾಯಗಳಿಗೆ ನೈಘುಂಟುಕ ಕಾಂಡವೆಂದೂ, ನಾಲ್ಕನೆಯ ಅಧ್ಯಾಯಕ್ಕೆ ನೈಗಮಕಾಂಡವೆಂದೂ, ಐದನೆಯದಕ್ಕೆ ದೈವತಕಾಂಡವೆಂದೂ ಹೆಸರು.

ಈ ಗ್ರಂಥದಲ್ಲಿ ಬರುವ ಶಬ್ದಗಳ ವ್ಯುತ್ಪತ್ತಿ, ಅರ್ಥವಿವರಣೆಗಳಿಗಾಗಿಯೇ ಒಂದು ಗ್ರಂಥ ಹುಟ್ಟಿಕೊಂಡಿತು. ಇದೇ ‘ನಿರುಕ್ತ’ ಎಂದು ಪ್ರಸಿದ್ಧವಾದಗ್ರಂಥ. ವೇದಶಬ್ದಗಳ ವ್ಯಾಖ್ಯಾನರೂಪದ ಇದೂ ವೇದಾಂಗವೆಂದು ಪರಿಗಣಿತವಾಯಿತು. ಈ ಗ್ರಂಥದ ಕರ್ತೃಗಳು ಯಾಸ್ಕಾಚಾರ್ಯರು. ಯಾಸ್ಕರ ನಿರುಕ್ತಕ್ಕಿಂತ ಮೊದಲ ಅನೇಕ ನಿರುಕ್ತಗಳಿದ್ದಂತೆ ತಿಳಿದು ಬರುತ್ತದೆ.

ನಿರುಕ್ತ ಸೂತ್ರರೂಪದಲ್ಲಿದೆ. ಇದರಲ್ಲಿ 14 ಅಧ್ಯಾಯಗಳಿವೆ. ಕೊನೆಯ ಎರಡು ಅಧ್ಯಾಯಗಳು ಪರಿಶಿಷ್ಟಗಳಾದರೆ ಉಳಿದ 12 ಅಧ್ಯಾಯಗಳು ಪೂರ್ವಷಟ್ಕ ಮತ್ತು ಉತ್ತರಷಟ್ಕವೆಂದು ಎರಡು ಭಾಗಗಳಲ್ಲಿ ವಿಭಕ್ತವಾಗಿವೆ.

ನಿರುಕ್ತದಲ್ಲಿ ಬರುವ ವಿಚಾರಗಳು ಈ ರೀತಿಯಿದೆ: ನಾಮಪದ, ಕ್ರಿಯಾಪದ ಉಪಸರ್ಗ, ನಿಪಾತಗಳ ಲಕ್ಷಣ, ಭಾವವಿಕಾರಲಕ್ಷಣ, ನಾಮಪದಗಳೆಲ್ಲ ಧಾತುಗಳಿಂದಲೇ ಹುಟ್ಟಿವೆ ಎಂಬ ನಿರ್ಣಯ, ಮಂತ್ರಗಳಿಗೆಲ್ಲ ಅರ್ಥವಿದೆ ಎಂಬ ಸಾಧಾರ ನಿರ್ಣಯ, ಮಂತ್ರದೇವತೆಗಳ ವಿವರ, ಅರ್ಥವನ್ನು ತಿಳಿದವರ ಪ್ರಶಂಸೆ, ಅರ್ಥತಿಳಿಯದವರ ನಿಂದೆ, ಪದನಿರ್ವಚನ ಕ್ರಮದ ನಿರೂಪಣೆ, ಮಂತ್ರಗಳ ಲಕ್ಷಣ.

ನಿರುಕ್ತವು ವೇದಾಂಗವಾಗಿ ಮಾತ್ರವಲ್ಲ ಐತಿಹಾಸಿಕವಾಗಿಯೂ ಮಹತ್ವದ್ದಾಗಿದೆ. ಕ್ರ.ಪೂ. 300ರಲ್ಲಿದ್ದ ಯಾಸ್ಕರ ಕಾಲದ ಸಾಮಾಜಿಕ ಸ್ಥಿತಿ-ಗತಿಯನ್ನು ಇದರಿಂದ ಊಹಿಸಬಹುದಾಗಿದೆ. ಆ ಕಾಲದಲ್ಲಿ ಸಂಸ್ಕೃತ ವ್ಯಾವಹಾರಿಕ ಭಾಷೆಯಾಗಿತ್ತೆಂಬುದಕ್ಕೆ ಪುರಾವೆ ದೊರೆಯುತ್ತದೆ. ಯಾಸ್ಕರ ಕಾಲದಲ್ಲೆ ಅನೇಕ ನಿರುಕ್ತಗಳೂ, ವ್ಯಾಕ್ಯರಣ ಗ್ರಂಥಗಳೂ ಇದ್ದವೆಂಬ ಸುಳಿವು ಸಿಗುತ್ತದೆ. ಭಾಷಾಶಾಸ್ತ್ರದ ದೃಷ್ಟಿಯಿಂದಲೂ ನಿರುಕ್ತಕ್ಕೆ ಅನುಪಮ ಮಹತ್ವ ಬಂದಿದೆ. ಯಾಸ್ಕರು ಮತ್ತವರಂತಹವರು ಆಕಾಲದಲ್ಲೇ ಎಷ್ಟು ವೈಜ್ಞಾನಿಕವಾಗಿ ಭಾಷೆಯನ್ನು ವಿವೇಚಿಸಿದ್ದಾರೆಂಬುದು ವಿಸ್ಮಯಕರವಾಗಿದೆ.

**ಜ್ಯೌತಿಷ**

ಭಾಸ್ಕರಾಚಾರ್ಯರ ಸಿದ್ಧಾಂತ ಶಿರೋಮಣಿಯಲ್ಲಿ ಈಶ್ಲೋಕವಿದೆ: ವೇದಾಸ್ತಾವತ್ ಯಜ್ಞಕರ್ಮಪ್ರವೃತ್ತಾಃ ಯಜ್ಞಾಃಪ್ರೋಕ್ತಾಸ್ತೇಕು ಕಾಲಾಶ್ರಯೇಣ। ಶಾಸ್ತ್ರಾದಸ್ಮಾತ್ ಕಾಲಬೋಧೋ ಯಥಾಸ್ಯಾತ್। ವೇದಾಂಗತ್ವಂ ಜ್ಯೌತಿಷ ಸ್ಯೋಕ್ತಮಸ್ಮಾತ್॥

ವೇದಗಳು ಯಜ್ಞಕರ್ಮಗಳಿಗಾಗಿ ಪ್ರವೃತ್ತವಾಗಿವೆ. ಯಜ್ಞಗಳು ಕಾಲವನ್ನಾಶ್ರಯಿಸಿವೆ. ಕಾಲವನ್ನು ಜ್ಯೌತಿಷವು ನಿರ್ಣಯಿಸುತ್ತದೆ. ಆದುದರಿಂದ ಜ್ಯೌತಿಷವು ವೇದಾಂಗವಾಗಿದೆ.

ಕಾಲ ನಿರ್ಣಯಕ್ಕೆ ಗ್ರಹಾದಿಗಳ ಚಲನೆಯನ್ನು ಪರಿಶೀಲಿಸಬೇಕಾಗುತ್ತದೆ. ಈ ಗ್ರಹಾದಿಗಳನ್ನೇ ಜ್ಯೋತಿಗಳೆಂದು ಕರೆಯಲಾಗಿದೆ. ಜ್ಯೋತಿಗಳ ವಿಜ್ಞಾನವನ್ನು ತಿಳಿಸುವ ಶಾಸ್ತ್ರವೇ ಜ್ಯೌತಿಷವೆನಿಸಿದೆ.

ಗ್ರಹ ನಕ್ಷತ್ರಗಳ ಮೂಲಕ ಕಾಲವನ್ನು ನಿರ್ಣಯಿಸುವುದರಿಂದ ಯಥಾಕಾಲ ವೈದಿಕ ಯಜ್ಞಗಳು ನೆರವೇರಬೇಕಾದುದರಿಂದ ಜ್ಯೌತಿಷವು ವೇದಾಂಗಗಳಲ್ಲಿ ಮೂರ್ಧನ್ಯಸ್ಥಾನದಲ್ಲಿದೆ. ಇದನ್ನೇ ವೇದಾಂಗ ಜ್ಯೌತಿಷವು ಹೀಗೆ ಹೇಳಿದೆ:

ಯಥಾಶಿಕಾ ಮಯೂರಾಣಾಂ ನಾಗಾನಾಂ ಮಣಯೋ ಯಥಾ। ತದ್ವದ್ವೇದಾಂಗ ಶಾಸ್ತ್ರಾಣಾಂ ಗಣಿತಂ ಮೂರ್ಧನಿ ಸ್ಥಿತಮ್

ನವಿಲುಗಳಿಗೆ ಶಿಖೆಯಂತೆ, ಸರ್ಪಗಳಿಗೆ ಮಣಿಯಂತೆ ವೇದಾಂಗಗಳಿಗೆ ಜ್ಯೌತಿಷವು ತಲೆಯ ಮೇಲಿದೆ.

ಜ್ಯೌತಿಷವು ವೇದಾಂಗ ಮತ್ತು ಲೌಕಿಕವೆಂದು 2 ವಿಧ. ಜ್ಯೌತಿಷದ ಮೂರು ಗ್ರಂಥಗಳು ಸಿಕ್ಕಿವೆ. ಒಂದು ‘ಯಾಜುಷ ಜ್ಯೌತಿಷ’, ಇನ್ನೊಂದು ‘ಆರ್ಚಜ್ಯೌತಿಷ’, ಮತ್ತೊಂದು ‘ಆಥರ್ವಜ್ಯೌತಿಷ’. ಮೊದಲನೆಯದರಲ್ಲಿ 43 ಶ್ಲೋಕಗಳೂ, ಎರಡನೆಯದರಲ್ಲಿ 36 ಶ್ಲೋಕಗಳೂ, ಮೂರನೆಯದರಲ್ಲಿ 162 ಶ್ಲೋಕಗಳೂ ಇವೆ. ಹೆಸರೇ ಸೂಚಿಸುವಂತೆ ಅವುಗಳು ಯಜುರ್ವೇದ, ಋಗ್ವೇದ, ಅಥರ್ವವೇದಗಳಿಗೆ ಸಂಬಂಧಿಸಿವೆ.

ವೇದಾಂಗ ಜ್ಯೌತಿಷದ ಕರ್ತೃ ಲಗಧ. ಇವನ ದೇಶ, ಕಾಲಗಳು ಅಜ್ಞಾತ. ಈ ಗ್ರಂಥಗಳಿಗೆ ಸೋಮಾಕರನ ಭಾಷ್ಯವಿದೆ. ಇವನು ದಾಕ್ಷಿಣಾತ್ಯ ಎಂಬುದನ್ನು ಬಿಟ್ಟರೆ ಇವನ ಬಗೆಗೆ ಬೇರೆ ವಿವರಗಳು ಅಲಭ್ಯ,

ವೈದಿಕಾಚಾರ್ಯರು ಸೂರ್ಯ, ಚಂದ್ರರ ಭವಿಷ್ಯದ ಚಲನೆಗಳನ್ನು ಲೆಕ್ಕ ಹಾಕುತ್ತಿದ್ದರು. ಅವರು 27 ನಕ್ಷತ್ರಗಳನ್ನು ಆಧರಿಸಿದ್ದರು. ರಾಶಿಗಳ ಲೆಕ್ಕ ಪ್ರಾರಂಭವಾದದ್ದು ಯವನರ (ಗ್ರೀಕರ) ಸಂಪರ್ಕವಾದ ಮೇಲೆ.

ವೈದಿಕಜ್ಯೌತಿಷಕ್ಕೂ ಅನಂತರದ ಸಿದ್ಧಾಂತ ಜ್ಯೌತಿಷಕ್ಕೂ ಅನೇಕ ವಿಷಯಗಳಲ್ಲಿ ವ್ಯತ್ಯಾಸವಿದೆ.

ವೇದಾಂಗ ಜ್ಯೌತಿಷದ ಪ್ರಕಾರ 5 ವರ್ಷಗಳ ಚಕ್ರವನ್ನು ಪರಿಗಣಿಸಲಾಗಿದೆ. ಇವುಗಳನ್ನು ಸಂವತ್ಸರ, ಪರಿವತ್ಸರ, ಇದಾವತ್ಸರ, ಅನುವತ್ಸರ, ಇದ್ವತ್ಸರ ಎಂದು ಕರೆಯುತ್ತಿದ್ದರು. ದರ್ಶಪೂರ್ಣ ಮಾಸಯಾಗಗಳು ಆಗ ಪ್ರಧಾನವಾಗಿದ್ದದ್ದರಿಂದ ಸೌರಮಾನವನ್ನು ಅನುಸರಿಸುತ್ತಿದ್ದರು. ಇದರ ಪ್ರಕಾರ ವರ್ಷಕ್ಕೆ 366 ದಿನಗಳು. ವರ್ಷದಲ್ಲಿ 124 ಪೂರ್ಣಪರ್ವಗಳು ಎಂದರೆ 62 ಹುಣ್ಣಿಮೆಗಳು ಮತ್ತು 62 ಅಮಾವಾಸ್ಯೆಗಳು.

**ಕಲ್ಪ :**

ವೇದಗಳಲ್ಲಿ ಅನೇಕ ಕರ್ಮಗಳ ವಿದಿ ವಿಧಾನಗಳಿವೆ. ಈ ಕರ್ಮಗಳು ವಿಪುಲವಾಗಿವೆ. ಆದುದರಿಂದ ಸಂಕೀರ್ಣವೂ ಆಗಿವೆ. ಇವುಗಳನ್ನು ಸ್ಪಷ್ಟವಾಗಿ ಗುರುತಿಸಿ ಗೊಂದಲವಿಲ್ಲದ ರೀತಿಯಲ್ಲಿ ಆಚರಿಸುವುದು ಕಠಿನ ಕೆಲಸ. ಅದಕ್ಕಾಗಿ ಇವುಗಳಿಗೆ ಆನುಪೂರ್ವಿಯನ್ನು ರಚಿಸಿ ಪುರೋಹಿತರಿಗೆ ಸರಳವಾಗಿ ಆಚರಿಸಲು ಅನುಕೂಲವಾಗುವಂತೆ ಮಾಡುವ ಆವಶ್ಯಕತೆಯಿತ್ತು. ಈ ಕಾರಣಕ್ಕಾಗಿಯೇ ಕಲ್ಪಸೂತ್ರಗಳ ರಚನೆಯಾಯಿತು. ಹೀಗೆ ವೇದವಿಹಿತ ಕರ್ಮಗಳನ್ನು ಆಚರಿಸಲು ಸಹಕಾರಿಯಾದುದರಿಂದ ಕಲ್ಪವೂ ಮಹತ್ವದ ವೇದಾಂಗವಾಯಿತು.

ಕಲ್ಪಸೂತ್ರಗಳು ಮುಖ್ಯವಾಗಿ ನಾಲ್ಕು ವಿಧವಾಗಿವೆ. 1) ಶ್ರೌತಸೂತ್ರಗಳು 2) ಗೃಹ್ಯ ಸೂತ್ರಗಳು 3) ಧರ್ಮಸೂತ್ರಗಳು 4) ಶುಲ್ಬಸೂತ್ರಗಳು.

ಬ್ರಾಹ್ಮಣ ಗ್ರಂಥಗಳಲ್ಲಿ ಹೇಳಿದ ಕರ್ಮಗಳನ್ನು ಶ್ರೌತಾಗ್ನಿಯಲ್ಲಿ ನಡೆಸಬೇಕು. ಇದಕ್ಕಾಗಿ ಶ್ರೌತಸೂತ್ರಗಳು ಬಂದವು. ಇವುಗಳು ಶ್ರೌತಕರ್ಮಗಳ ವಿಧಿವಿಧಾನವನ್ನು ವಿವರಿಸುತ್ತವೆ.

ಗೃಹ್ಯಾಗ್ನಿಯಿಂದ ಆಚರಿಸಬೇಕಾದ ಉಪನಯನಾದಿ ಸಂಸ್ಕಾರಗಳನ್ನು ವಿವರಿಸುವುದು ಗೃಹ್ಯಸೂತ್ರಗಳ ಕಾರ್ಯ.

ವರ್ಣಾಶ್ರಮಧರ್ಮ, ರಾಜಧರ್ಮಾದಿಗಳನ್ನು ವಿವರಿಸುವುದು ಧರ್ಮಸೂತ್ರಗಳು. ವೇದಿಯ ನಿರ್ಮಾಣ ವಿಧಾನವನ್ನು ಹೇಳುವ ಸೂತ್ರಗಳು ಶುಲ್ಬಸೂತ್ರಗಳು.

ಆಶ್ವಲಾಯನ ಮತ್ತು ಶಾಂಖಾಯನ ಶ್ರೌತಸೂತ್ರಗಳು ಋಗ್ವೇದಕ್ಕೆ ಸಂಬಂಧಿಸಿದವು. ಕಾತ್ಯಾಯನ ಶ್ರೌತಸೂತ್ರ ಶುಕ್ಲಯಜುರ್ವೇದದ್ದು. ಕೃಷ್ಣ ಯಜುರ್ವೇದಕ್ಕೆ ಬೌಧಾಯನ, ಆಪಸ್ತಂಬ, ಸತ್ಯಾಷಾಢ, ವೈಖಾನಸ, ಭಾರದ್ವಾಜ, ಮಾನವಶ್ರೌತ ಸೂತ್ರಗಳಿವೆ. ಸಾಮವೇದಕ್ಕೆ ಆರ್ಷೇಯ ಶ್ರೌತಸೂತ್ರ. ಅಥರ್ವಕ್ಕೆ ವೈತಾನ ಶ್ರೌತಸೂತ್ರ.

ಹೀಗೆ ಗೃಹ್ಯಸೂತ್ರಗಳೂ ಬೇರೆಬೇರೆ ವೇದಕ್ಕೆ ಬೇರೆಬೇರೆಯಾಗಿವೆ. ಋಗ್ವೇದಕ್ಕೆ- ಆಶ್ವಲಾಯನ ಮತ್ತು ಶಾಂಖಾಯನ, ಶುಕ್ಲಯಜುರ್ವೇದಕ್ಕೆ ಪಾರಸ್ಕರ. ಕೃಷ್ಣಯಜುರ್ವೇದಕ್ಕೆ – ಬೋಧಾಯನ, ಆಪಸ್ತಂಬ, ಭಾರದ್ವಾಜ. ಸಾಮವೇದಕ್ಕೆ – ಗೋಭಿಲ ಮತ್ತು ಖಾದಿರ, ಅಥರ್ವಕ್ಕೆ ಕೌಶಿಕಗೃಹ್ಯ ಸೂತ್ರವೊಂದೇ.

ಧರ್ಮಸೂತ್ರಗಳೂ ವೇದಾನುಸಾರ ಬೇರೆಬೇರೆ ಇವೆ. ವಸಿಷ್ಠಾದಿ ಋಷಿಗಳ ಹೆಸರಿನಲ್ಲಿ ಇವುಗಳು ಪ್ರಸಿದ್ಧವಾಗಿವೆ.

ಶುಲ್ಬಸೂತ್ರಗಳನ್ನು ಕಾತ್ಯಾಯನರು ರಚಿಸಿದರು. ಇದರಲ್ಲಿ ವೇದಿಗಳನ್ನು ನಿರ್ಮಿಸುವ ವಿಧಾನಗಳನ್ನು ನಿರೂಪಿಸಲಾಗಿದೆ.

ಈ ವೇದಾಂಗಳಲ್ಲಿ ಛಂದಸ್ಸು ವೇದಗಳ ಕಾಲುಗಳು, ಕಲ್ಪ ಕೈಗಳು, ಜ್ಯೌತಿಷ ಕಣ್ಣು, ನಿರುಕ್ತ ಕಿವಿ, ಶಿಕ್ಷಾ ಮೂಗು ಮತ್ತು ವ್ಯಾಕರಣ ಮುಖ ಎಂಬೊಂದು ವರ್ಣನೆ ಪ್ರಖ್ಯಾತವಾಗಿದೆ.

(ಈ ಲೇಖನವನ್ನು ಸಿದ್ಧಪಡಿಸುವಲ್ಲಿ ‘ವೈದಿಕ ಸಾಹಿತ್ಯ ಚರಿತ್ರೆ’ಯನ್ನು ಪ್ರಮುಖವಾಗಿ ಆಧರಿಸಲಾಗಿದೆ.- ಲೇ.) □

## ಎಲ್ಲರ ಮನೆ, ಮನದಂಗಳದ ಎಲ್ಲಂಗಳ ವಿಷ್ಣು ಶ್ಯಾನುಭೋಗ್ ದಂಪತಿಗಳಿಗೆ ಸಂಭ್ರಮದ ಷಷ್ಟ್ಯಬ್ಧಿ ಸಮಾರಂಭ

ಲೇಖನ : ಶ್ರೀಮತಿ ಕಸ್ತೂರಿ ಕೃಷ್ಣ ರಾವ್.

ಹುಟ್ಟಿನಿಂದ ಮೊದಲ್ಗೊಂಡು ಅಂತ್ಯೇಷ್ಟಿಯವರೆಗೆ ಮಾನವರಿಗೆ ಷೋಡಶ ಸಂಸ್ಕಾರಗಳನ್ನು ಸನಾತನರು ಹೇಳಿದ್ದಾರೆ. ಅಷ್ಟೇ ಅಲ್ಲದೇ ಜೀವನದಲ್ಲಿರುವ ಅನೇಕ ದೋಷಗಳು ಮತ್ತು ಸಂಕಷ್ಟಗಳ ನಿವಾರಣೆಗಾಗಿ ಕೂಡಾ ಹಲವು ಉಪಯುಕ್ತ ಧಾರ್ಮಿಕ ಪರಿಹಾರ ವಿಧಿಗಳನ್ನು ಸೂಚಿಸಿದ್ದಾರೆ.

ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ತುಂಬಿದ ಸಂಸಾರವಂದಿಗರಾಗಿ, 60 ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸುವುದೆಂದರೆ ಸುಲಭದ ಮಾತಲ್ಲ. ಹಾಗೆಯೇ ಪರಹಿತ ಚಿಂತನೆಯೇ ಮುಖ್ಯ ಧ್ಯೇಯವಾಗಿರಿಸಿಕೊಂಡು ಸುತ್ತಲಿನ ಸಮಾಜದ ಆಗುಹೋಗುಗಳಿಗೆ ಸ್ಪಂದಿಸುತಾ ಎಲ್ಲರಿಗೂ ಬೇಕಾದವರೆನ್ನಿಸಿಕೊಂಡು ಬದುಕುವ ಜನರೂ ಅಪರೂಪ. ಮೇಲಿನ ಎರಡನ್ನೂ ಸಾಧಿಸಿ ತೋರಿಸಿದವರು ಕಾಸರಗೋಡಿನ ಎಲ್ಲಂಗಳ ವಿಷ್ಣು ಶ್ಯಾನುಭೋಗರು.

ಇತ್ತೀಚೆಗೆ (29-12-2008) ತಾನೇ ಅವರು ‘ಸಹಸ್ರಚಂದ್ರದರ್ಶನ’ ಶಾಂತಿ ಆಚರಿಸಿಕೊಂಡವರು. 83ವರ್ಷ ಪ್ರಾಯದ ಈ ಹಿರಿಯ ಜೀವ, ಕೂಡ್ಲು ಮನೆತನದ ಸುಗಂಧಿಯವರನ್ನು ವಿವಾಹವಾಗಿ 60 ವರ್ಷಗಳೂ ತುಂಬಿದ್ದವು. ಈ ಸುಂದರ ನೆನಪಿಗಾಗಿ, ಬಂಧು-ಮಿತ್ರರೆಲ್ಲರನ್ನೂ ಬರಮಾಡಿಕೊಂಡು, ತಮ್ಮ ಸ್ವಗೃಹ ಶ್ರೀ ಕೃಷ್ಣ ಮಂದಿರದಲ್ಲಿ ಧಾರ್ಮಿಕ ವಿಧಿ-ವಿಧಾನಗಳ ಸಹಿತ ವಿದ್ವತ್ ಸಭೆಯನ್ನು ಏರ್ಪಡಿಸಿದ್ದರು. ಬ್ರಹ್ಮಶ್ರೀ ಉಳಿಯ ವಿಷ್ಣು ಅಸ್ರರವರು ಜ್ಯೋತಿ ಬೆಳಗಿ ಸಮಾರಂಭವನ್ನು ಉದ್ಘಾಟಿಸಿ ಹಿರಿಯ ದಂಪತಿಗಳಿಗೆ ಶುಭ ಹಾರೈಸಿದರು. ಧಾರ್ಮಿಕ ವಿಧಿಗಳ ನೇತೃತ್ವ ವಹಿಸಿದ್ದ ವೇದಮೂರ್ತಿ ಶ್ರೀ ನಾಗೇಂದ್ರ ಭಟ್ಟರು. ‘ಸಹಸ್ರ ಚಂದ್ರದರ್ಶನ’ ಶಾಂತಿ ಆಚರಿಸುವುದರ ಕುರಿತು ಸೋದಾಹರಣ ಪೂರ್ವಕ ಉಪನ್ಯಾಸವಿತ್ತರು. ಮತ್ತು ‘ಗೃಹಸ್ಥ ಧರ್ಮ’ದ ಮರ್ಮವನ್ನು ವಿವರಿಸಿದರು.



ವಿದುಷಿ ಜಯಲಕ್ಷ್ಮಿ ಕಾರಂತರವರು ಮುಖ್ಯ ಅತಿಥಿಯ ಸ್ಥಾನದಿಂದ ಮಾತನಾಡುತ್ತಾ, ಮನುಷ್ಯರಾಗಿ ಹುಟ್ಟಿದ ಮೇಲೆ ಸಮಾಜಕ್ಕಾಗಿ ಸ್ವಲ್ಪವಾದರೂ ತ್ಯಾಗ ಮನೋಭಾವದಿಂದ ಕೆಲಸಮಾಡಬೇಕಾದದ್ದು ಎಲ್ಲರ ಕರ್ತವ್ಯ ಹಾಗೂ ಶ್ಯಾನುಭೋಗರು ಸಮಾಜದ ಎಲ್ಲಾ ವರ್ಗದವರ ಏಳಿಗೆಗಾಗಿ ಅತ್ಯುಪಯುಕ್ತ ಕಾರ್ಯಗಳನ್ನು ಮಾಡಿ ಧನ್ಯರಾಗಿದ್ದಾರೆ ಎಂದರು.

ಕರ್ನಾಟಕ ಏಕೀಕರಣ ಸಮಿತಿಯಲ್ಲಿ, ವಿವಿಧ ದೇಗುಲಗಳ ಜೀರ್ಣೋದ್ಧಾರ ಸಮಿತಿಯಲ್ಲಿ, ಬ್ರಾಹ್ಮಣ ಸಂಘಟನೆಗಳಲ್ಲಿ ಹಾಗೂ ಇನ್ನಿತರ ಸಂಘಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ ಶ್ಯಾನುಭೋಗರ ಬದುಕು ಆದರ್ಶಪ್ರಾಯ ಎಂದವರು ಕೇರಳ ಕನ್ನಡ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷರಾದ ಶ್ರೀ ಎಸ್. ವಿ ಭಟ್‌ರವರು.

ಎಲ್ಲರ ಮನೆ, ಮನದಂಗಳಗಳಲ್ಲಿ ಪ್ರೀತಿ ಗೌರವದ ಸ್ಥಾನಮಾನ ಪಡೆದಿರುವ ಕಾಸರಗೋಡು ಎಲ್ಲಂಗಳ ವಿಷ್ಣು ಶ್ಯಾನುಭೋಗ್ ದಂಪತಿಗಳನ್ನು ಗೌರವಾದರಗಳಿಂದ ಸುಬ್ರಹ್ಮಣ್ಯ ಸಭಾ, ವಿಜಯ ಸಂಗೀತ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ ಕೇರಳ ಘಟಕ ಮುಂತಾದ ಸಂಘಟನೆಗಳ ಪರವಾಗಿ ಶಾಲುಹೊದಿಸಿ ಫಲತಾಂಬೂಲವಿತ್ತು ಸನ್ಮಾನಿಸಲಾಯಿತು. ತಮ್ಮ ಸೇವೆ ಸಾಧನೆ ಅಲ್ಪವಾದರೂ ಪೀತ್ಯಾದರಗಳಿಂದ ಗೌರವಿಸಿ, ಅಭಿಮಾನದ ನುಡಿಗಳನ್ನು ಆಡಿದ ಹಾಗೂ ಕರೆಗೆ ಓಗೊಟ್ಟು ಬಂದ ಎಲ್ಲರಿಗೂ ಎ.ವಿ. ಶ್ಯಾನುಭೋಗರು ಕೃತಜ್ಞತೆ ಸಲ್ಲಿಸಿದರು. ವಿಜಯ ಸಂಗೀತ ಪ್ರತಿಷ್ಠಾನದ ಶ್ರೀ ಮುರಳೀಧರ್ ಮತ್ತು ವಿದುಷಿ ರಾಧಾಮುರಳೀಧರರವರು ಸಭಾ ಕಲಾಪ ವ್ಯವಸ್ಥೆಗೊಳಿಸಿದ್ದರು. ಕು। ಇಂಚರಳಿಂದ ಪ್ರಾರ್ಥನೆ, ಶ್ರೀ ಸುಕುಮಾರ ಅಲಂಪಾಡಿಯವರು ಸ್ವಾಗತ, ಶ್ರೀಮತಿ ಸುಧಾಮೂರ್ತಿ ಮತ್ತು ಶ್ರೀಮತಿ ಶ್ವೇತಾನಾಗೇಶ್‌ರವರ ಗೀತಗಾಯನ, ವಿಷ್ಣುಮೂರ್ತಿಯವರ ನಿರೂಪಣೆ ಹಾಗೂ ವಂದನಾರ್ಪಣೆಯೊಂದಿಗೆ ಸಭಾಕಲಾಪ ಕೊನೆಗೊಳಿಸಲ್ಪಟ್ಟಿತು.

ಗಣಹೋಮ, ತ್ರಿಕಾಲ ಪೂಜೆ, ಸತ್ಯನಾರಾಯಣ ವ್ರತ, ನವಗ್ರಹ ಶಾಂತಿ ಹೋಮ, ಸಂಜೀವಿನಿ ಮೃತ್ಯುಂಜಯ ಹೋಮ, ದುರ್ಗಾದೀಪ ನಮಸ್ಕಾರ ಇತ್ಯಾದಿ ಧಾರ್ಮಿಕ ವಿಧಿಗಳನ್ನು ಪಾವಂಜೆಯ ಬ್ರಹ್ಮಶ್ರೀ ವಾಸುದೇವ ಭಟ್ಟರ ನೇತೃತ್ವದಲ್ಲಿ ವೇ। ಮೂ। ನಾಗೇಂದ್ರಭಟ್ ಮತ್ತು ಅವರ ತಂಡದವರು ಸಾಂಗವಾಗಿ ನೆರವೇರಿಸಿಕೊಟ್ಟರು. ಅಚ್ಚುಕಟ್ಟಾದ ಊಟೋಪಹಾರ, ಉಪಚಾರಗಳ ವ್ಯವಸ್ಥೆಯೂ ಇತ್ತು.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಜ್ಯೋತಿ ಹಾಗೂ ಶ್ರೀ ವಿಶ್ವನಾಥ ಶ್ಯಾನುಭೋಗರ ಪುತ್ರಿ **ಮೇಘಾ** ಹಾಗೂ ನಂದಾವರ ಕೌಳಿಗೆ ಶ್ರೀಮತಿ ಉಷಾ ಹಾಗೂ ಶ್ರೀ ಸುಂದರ ರಾವ್ ಅವರ ಪುತ್ರ **ಸುದರ್ಶನ** ಇವರ ವಿವಾಹವು **ತಾ.24-12-2008**ರಂದು ಉಡುಪಿ **ಶ್ರೀ ಶಾರದಾ ಮಂಟಪ**ದಲ್ಲಿ ನೆರವೇರಿತು.

□ □ □ □ □

ಮುಂಬಯಿಯಲ್ಲಿರುವ ಆರೂರು ಶ್ರೀ ಮಂಜುನಾಥರವರ ಪುತ್ರ **ಶೈಲೇಶ್**ನ ವಿವಾಹವು ಬೆಂಗಳೂರಿನಲ್ಲಿರುವ ಶ್ರೀ ಇನ್ನಾ ಮಾಧವರಾಯರ ಪುತ್ರಿ **ಮಾನಸ**ಳೊಂದಿಗೆ **ತಾ.19-12-2008**ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## 'ಶಿವಸನ್ನಿಧಿ' ಗೃಹಪ್ರವೇಶದ ದಶಮಾನೋತ್ಸವ

ಗೃಹಪ್ರವೇಶವಾಗಿ 10 ವರ್ಷಗಳು ತುಂಬಿದ ಕಾರಣ ಶ್ರೀಮತಿ ವನಿತಾ ವ್ಯಾಸರಾವ್ ಮತ್ತು ಶ್ರೀ ವ್ಯಾಸ ರಾವ್ ನಂದಳಿಕೆ ಇವರು **ತಾ.21-12-2008ನೇ ಆದಿತ್ಯವಾರ** ತಮ್ಮ ಮನೆ ಶಿವಸನ್ನಿಧಿಯಲ್ಲಿ ಕುಟುಂಬಿಕರು, ಸಹೋದರ-ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು-ಬಾಂಧವರೊಂದಿಗೆ ಬೆಳಿಗ್ಗೆ ಶ್ರೀ ಗಣಯಾಗ ಮತ್ತು ಸತ್ಯನಾರಾಯಣ ಪೂಜೆ ಮಾಡುವ ಮೂಲಕ ಗೃಹಪ್ರವೇಶದ ದಶಮಾನೋತ್ಸವವನ್ನು ಆಚರಿಸಿದರು. ಸಮಾರಂಭಕ್ಕೆ ಆಗಮಿಸಿದ ಬಂಧು ಮಿತ್ರರೆಲ್ಲರೂ ಶುಭ ಕೋರಿ ಆಶೀರ್ವಚಿಸಿದರು.

## ಬ್ರಹ್ಮೋಪದೇಶ

**ಪ್ರತೀಕ್**

ಮಂಗಳೂರು ಕರಂಗಲ್‌ಪಾಡಿಯಲ್ಲಿ ವಾಸ್ತವ್ಯವಿರುವ ಶ್ರೀಮತಿ ಆರತಿ ಹಾಗೂ ಶ್ರೀ ಕೆ. ನಾಗರಾಜ ಶರ್ಮ (ಶ್ರೀಮತಿ ಸರೋಜಿನಿ ಮತ್ತು ಶ್ರೀ ಅನಂತ ಶರ್ಮರ ಪುತ್ರ)ರ ಪುತ್ರ **ಪ್ರತೀಕ್** ಶರ್ಮನ ಉಪನಯನವು **ತಾ.31-12-2008**ರಂದು ಮಂಗಳೂರಿನ **ಶ್ರೀ ಸುಬ್ರಹ್ಮಣ್ಯ ಸಭಾಭವನ**ದಲ್ಲಿ ನೆರವೇರಿತು.

## ಜನನ

ಬೈಕಾಡಿ ಡಾ। ಅನಿಲ್ ಕುಮಾರ್ ಮತ್ತು ಶ್ರೀಮತಿ ಡಾ। ಪ್ರಸನ್ನ ಎ. ರಾವ್ ಇವರಿಗೆ ತಾ.14-11-2008 ರಂದು ಗಂಡು ಮಗುವಿನ ಜನನ.


## ನಿಧನ

ಹೋಟೆಲ್ ಉದ್ಯಮಿ, ಸಮಾಜ ಸೇವಕ ಹಾಗೂ ಕರ್ನಾಟಕ ಹೋಟೆಲ್ ಎಸೋಸಿಯೇಶನ್‌ನ ಗೌರವಾಧ್ಯಕ್ಷರಾಗಿದ್ದ ಮತ್ತು ಹಿರಿಯ ರಾಜಕಾರಣಿ ಇನ್ನಾ ಶ್ರೀನಿವಾಸ ರಾವ್ (77 ವರ್ಷ) ತಾ.28-12-08 ರಂದು ನಿಧನರಾದರು. ಇವರು ಪತ್ನಿ, ನಾಲ್ವರು ಪುತ್ರರನ್ನು ಹಾಗೂ ಅಪಾರ ಬಂಧು-ಬಳಗವನ್ನೂ ಅಗಲಿದ್ದಾರೆ.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 13-01-2009 | **ಮಕರ ಸಂಕ್ರಮಣ** |
| 14-01-2009 | **ಸಂಕಷ್ಟ ಚತುರ್ಥೀ** ಚಂದ್ರೋದಯ ರಾತ್ರಿ, ಗಂ.9.42ಕ್ಕೆ |
| 21-01-2009 | **ಸರ್ವೈಕಾದಶೀ** |
| 23-01-2009 | **ಪ್ರದೋಷಃ** **ಶ್ರಾವಣ ನಕ್ಷತ್ರಾರಂಭ** |
| 26-01-2009 | **ಅಮಾವಾಸ್ಯಾ, ಸೂರ್ಯಗ್ರಹಣ** |
| 05-02-2009 | **ಧನಿಷ್ಠಾ ನಕ್ಷತ್ರಾರಂಭ** **ಸರ್ವೈಕಾದಶೀ** |
| 06-02-2009 | **ವೈಷ್ಣವ ಏಕಾದಶೀ** |
| 07-02-2009 | **ಪ್ರದೋಷಃ** |
| 09-02-2009 | **ಪೂರ್ಣಿಮಾ** |
| 12-02-2009 | **ಕುಂಭ ಸಂಕ್ರಮಣ** **ಸಂಕಷ್ಟ ಚತುರ್ಥೀ** ಚಂದ್ರೋದಯ ರಾತ್ರಿ, ಗಂ.9.13ಕ್ಕೆ |

## ವಿದೇಶ ಪ್ರಯಾಣ



**ವೈ. ದೀಪಕ್ ರಾವ್**

ಬೆಂಗಳೂರಿನ L & T ಯಲ್ಲಿ ಉದ್ಯೋಗಿಯಾಗಿರುವ ವೈ. ದೀಪಕ್ ರಾವ್ ಇವರು ಜೆ. ಆರ್.ಎಮ್. ಏಷಿಯಾ ಪೆಸಿಫಿಕ್ ಪ್ರೈ. ಲಿ., ಸಿಂಗಾಪುರ ಕಂಪೆನಿಯಲ್ಲಿ ಉದ್ಯೋಗ ಲಭಿಸಿರುವುದರಿಂದ ಕಾರ್ಯ ನಿರ್ವಹಿಸಲು ಸಿಂಗಾಪುರಕ್ಕೆ ತೆರಳಿದ್ದಾರೆ. ಇವರು ಮಣಿಪಾಲದ ತಾಂತ್ರಿಕ ಮಹಾವಿದ್ಯಾಲಯ (ಎಂ.ಐ.ಟಿ. ಮಣಿಪಾಲ) ದಿಂದ ಬಿ.ಇ. (ಮೆಕಾನಿಕಲ್) ಪದವಿ ಪಡೆದಿರುವರು. ಇವರು ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ವೈ. ಮೋಹನ ರಾವ್ (ಸ.ಪ.ಪೂ, ಕಾಲೇಜ್ ಪೊಲಿಪು, ಕಾಪು ಇಲ್ಲಿ ಅತಿಥಿ ಉಪನ್ಯಾಸಕರು) ಮತ್ತು ಶ್ರೀಮತಿ ಉಷಾ ಮೋಹನ ರಾವ್ ( ಉಡುಪಿಯ ಸೈಂಟ್ ಸಿಸಿಲಿ ಶಾಲೆಯಲ್ಲಿ ಶಿಕ್ಷಕಿ) ಇವರ ಸುಪುತ್ರ. ವೈ. ದೀಪಕ್ ರಾವ್ ಇವರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಎಸ್.ಎಸ್.ಎಲ್.ಸಿ. ಪರೀಕ್ಷಾ ತರಬೇತಿ ಶಿಬಿರ

ದಿನಾಂಕ 18-01-2009ನೇ ರವಿವಾರ ಬೆಳಿಗ್ಗೆ ಗಂಟೆ 9-30ರಿಂದ ಸಾಯಂಕಾಲ ಗಂಟೆ 4.30ರ ವರೆಗೆ ಶ್ರೀ ಶಾರದಾ ಮಂಟಪದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ದ್ವಿತೀಯ ಹಾಗೂ ಕೊನೆಯ ಹಂತದ ಶಿಬಿರ ನಡೆಯುವುದು. ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.

– ಶಿಕ್ಷಣ ವೇದಿಕೆ

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.12-02-2009ರಂದು ಮತ್ತು 14-03-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**– ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಫೆಬ್ರವರಿ ತಿಂಗಳಲ್ಲಿ**

**ತಾ.14-02-2009ರ ಶನಿವಾರ**

ಸಂಜೆ ಗಂಟೆ 5-30ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**– ಶ್ರೀಶಾರದಾ ದೇವಸ್ಥಾನ ವೇದಿಕೆ**

## ನಂದಿಕೂರು ಸಂಜೀವ ರಾಯರಿಗೆ ಪ್ರಶಸ್ತಿ

ಪಡುಬಿದ್ರಿ ಸಹಕಾರಿ ವ್ಯವಸಾಯಿಕ ಬ್ಯಾಂಕ್ ಇದರ ಸುವರ್ಣಮಹೋತ್ಸವದ ಸಮಾರಂಭದಲ್ಲಿ ನಂದಿಕೂರಿನ ಶ್ರೀ ಎಸ್. ಸಂಜೀವ ರಾವ್ ಇವರಿಗೆ ಉತ್ತಮ ಕೃಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಾ.28-12-2008ರಂದು ಪಡುಬಿದ್ರಿಯಲ್ಲಿ ನಡೆದ ಸುವರ್ಣಮಹೋತ್ಸವ ಸಮಾರಂಭದಲ್ಲಿ ನಂದಿಕೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮುಖ್ಯ ಅರ್ಚಕರಾದ ಶ್ರೀ ವೆಂಕಟೇಶ ಪುರಾಣಿಕರು ಶಾಲು, ಹಾರ, ಫಲ-ಪುಷ್ಪ, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.

ನಂದಿಕೂರು ಶಾಮಣ್ಣಯ್ಯ-ಲಕ್ಷ್ಮೀಯಮ್ಮ ದಂಪತಿಗಳ ಪುತ್ರರಾದ ಶ್ರೀ ಸಂಜೀವರಾಯರು ನಂದಿಕೂರಿನಲ್ಲಿ ಸುಮಾರು 2 ಎಕ್ರೆ ಜಮೀನಿನಲ್ಲಿ ನಾನಾಬಗೆಯ ಕೃಷಿ ಬೆಳೆಗಳನ್ನು ಬೆಳೆಸಿ, ಅತ್ಯಾಧುನಿಕ ಕೃಷಿ ಪದ್ಧತಿಯನ್ನೂ ಅಳವಡಿಸಿ, ಅತೀ ಹೆಚ್ಚು ಇಳುವರಿ ಪಡೆದಿರುತ್ತಾರೆ.

ವಿವಿಧ ಸೇವಾ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ಸಂಜೀವ ರಾಯರ ಸಾಧನೆಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಶ್ರೀಶಾರದಾ ದೇವಸ್ಥಾನದಲ್ಲಿ ಸೌಂದರ್ಯಲಹರೀ ಪಾರಾಯಣ

ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.

– ಮಹಿಳಾ ವೇದಿಕೆ

## ಅಗಲಿದ ಇನ್ನ ಶಿವರಾಯರಿಗೆ ಶ್ರದ್ಧಾಂಜಲಿ

ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ದಿನಾಂಕ 23-12-2008ರಂದು ಇತ್ತೀಚೆಗೆ ವಿಧಿವಶರಾದ ಇನ್ನ ಶಿವರಾಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನ ವೇದಿಕೆಯ ಸಕ್ರಿಯ ಸದಸ್ಯರಾಗಿದ್ದ ಇವರು ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ನಡೆಯುವ ಕಾರ್ಯಕ್ರಮಗಳಿಗೆ ಧನ ಸಹಾಯ ಮಾಡಿ ದಾನಿಗಳೆನಿಸಿಕೊಂಡಿದ್ದರು.

ಸಂತಾಪ ಸೂಚಕ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು, ಯಾಜಿ ಡಾ। ಎಚ್. ನಿರಂಜನ್‌ಭಟ್ ಮತ್ತು ಉಡುಪಿಯ ಸತ್ಸಂಗದ ಎಸ್. ಎ. ಭಂಡಾರ್‌ಕರ್‌ರವರು ಮೃತರ ಗುಣಗಾನ ಮಾಡಿದರು.

ಸತ್ಸಂಗದ ವತಿಯಿಂದ ಮೃತರ ಸ್ಮರಣಾರ್ಥವಾಗಿ ಎಸ್.ಎ. ಭಂಡಾರ್‌ಕರ್‌ರವರು ರೂ.10,000/-ವನ್ನು ಶ್ರೀಶಾರದಾ ದೇವಸ್ಥಾನ ಟ್ರಸ್ಟಿಗೆ ಮತ್ತು ಮೃತರ ಪುತ್ರಿ ಶ್ರೀಮತಿ ಸುಜಾತ ಜಯರಾಂರವರು ರೂ.25,000/-ವನ್ನು ಸಂಘಕ್ಕೆ ದೇಣಿಗೆ ನೀಡಿರುತಾರೆ. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಈ ಕಾಣಿಕೆಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತದೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ವೈ. ವಿಠಲ ರಾವ್. ಉತ್ತರಿಸಿದವರು : ಡಾ। ವೈ. ಸುದರ್ಶನ ರಾವ್.**

**ಪ್ರಶ್ನೆ : ಅಧಿಕ ರಕ್ತದೊತ್ತಡ, ಸಿಹಿಮೂತ್ರ ಮತ್ತು ಹೃದ್ರೋಗ ಅನೇಕ ರೋಗಿಗಳಲ್ಲಿ ಒಟ್ಟಿಗೆ ಇರುವುದು ನೀವು ಗಮನಿಸಿರಬಹುದು. ಇದಕ್ಕೆ ಕಾರಣವೇನು?**

ಉತ್ತರ : ಯಾವುದೇ ಒಂದು ಖಾಯಿಲೆಯು ಒಬ್ಬನಲ್ಲಿ ಕಾಣಿಸಿಕೊಳ್ಳುವ ಮೊದಲು ಅದಕ್ಕೆ ಕಾರಣೀಭೂತವಾಗಬಹುದಾದ ಕೆಲವು ಸಂದರ್ಭಗಳಿರುತ್ತವೆ. ಇಂತಹ ಕಾರಣಗಳಲ್ಲಿ ಕೆಲವು ಸಿಹಿಮೂತ್ರ ಮತ್ತು ಅಧಿಕ ರಕ್ತದೊತ್ತಡಗಳಿಗೆ ಒಂದೇ ಆಗಿರುವುದರಿಂದ ಅನೇಕ ಬಾರಿ ಒಂದೇ ರೋಗಿಯಲ್ಲಿ ಎರಡೂ ಖಾಯಿಲೆಗಳಿರುವವು. ಈ ಎರಡೂ ಖಾಯಿಲೆಗಳು ಹಲವು ವರ್ಷಗಳ ನಂತರ ಹೃದಯದ ರಕ್ತಪರಿಚಲನೆಯ ಮೇಲೆ ದುಷ್ಪರಿಣಾಮ ಬೀರುವುದರಿಂದ ಅವರಿಗೆ ಹೃದ್ರೋಗವೂ ಆರಂಭಗೊಳ್ಳಬಹುದು.

ಮೇದೋಜೀರಕ ಗ್ರಂಥಿಯಲ್ಲಿರುವ ಬೀಟಾ ಜೀವಕಣಗಳಿಂದ ಉತ್ಪತ್ತಿಯಾಗುವ ಇನ್‌ಸುಲಿನ್ ಕೊರತೆಯಿಂದ ಸಿಹಿಮೂತ್ರ ರೋಗ ಆರಂಭವಾಗುವುದು. ಬೀಟ ಜೀವಕಣಗಳ ಕಾರ್ಯಕ್ಷಮತೆ ಕಡಿಮೆಯಾಗಲು ಕಾರಣಗಳು ಹೀಗಿವೆ.

* ಅನುವಂಶೀಯತೆ
* ಮೇದೋಜೀರಕ ಗ್ರಂಥಿಯ ವೈಫಲ್ಯ (ಅತಿಯಾದ ಮದ್ಯಪಾನವೂ ಸೇರಿದಂತೆ ವಿವಿಧ ಕಾರಣಗಳಿಂದ)
* ದಢೂತಿ ದೇಹ, ವ್ಯಾಯಾಮವಿಲ್ಲದ ದಿನಚರಿ,
* ವಿರಾಮವಿಲ್ಲದ ಒತ್ತಡದ ಜೀವನಶೈಲಿ
* ಕೆಲವು ಔಷಧಗಳ ಸೇವನೆ (ಉದಾ: ಕೆಲವು ಮಾನಸಿಕ ರೋಗದ ಔಷಧಗಳು)

ಅಧಿಕ ರಕ್ತದೊತ್ತಡ ಆರಂಭಗೊಳ್ಳಲು ಕಾರಣಗಳು ಹೀಗಿವೆ.

* ಅನುವಂಶೀಯತೆ
* ದಢೂತಿ ದೇಹ, ವ್ಯಾಯಾಮವಿಲ್ಲದ ಜೀವನ
* ಅತಿಯಾದ ಎಣ್ಣೆ ಪದಾರ್ಥ ಸೇವನೆ ಅಥವಾ ಇತರ ಯಾವುದೇ ಕಾರಣಗಳಿಂದ ರಕ್ತದಲ್ಲಿ ಕೊಬ್ಬಿನಂಶ ಹೆಚ್ಚಿರುವುದು.
* ವಿರಾಮವಿಲ್ಲದ, ಒತ್ತಡದ ಜೀವನ ಶೈಲಿ
* ಸಿಗರೇಟು ಸೇವನೆ
* ಅತಿಯಾದ ಉಪ್ಪಿನ ಬಳಕೆ
* ಸಿಹಿಮೂತ್ರರೋಗದ ದುಷ್ಪರಿಣಾಮವೂ ಸೇರಿದಂತೆ ವಿವಿಧ ಕಾರಣಗಳಿಂದಾಗುವ ಕಿಡ್ನಿ ವೈಫಲ್ಯ, ಅಡ್ರಿನಲ್, ಪಿಟ್ಯುಟರಿ ಹಾಗೂ ಪ್ಯಾರಥೈರೊಯಿಡ್ ನಿರ್ನಾಳ ಗ್ರಂಥಿಗಳ ಕೆಲಸದಲ್ಲಿನ ಏರುಪೇರುಗಳು
* ಗರ್ಭನಿರೋಧಕ ಔಷಧಗಳು ಹಾಗೂ ಇತರ ಸಣ್ಣಪುಟ್ಟ ಕಾರಣಗಳು

ಪಾಶ್ಚಾತ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುತ್ತಿರುವ ನಮ್ಮ ದೇಶದಲ್ಲಿ ಈಗ ಈ ಮೂರು ಖಾಯಿಲೆಗಳು ವ್ಯಾಪಕವಾಗಿವೆ. ಮೇಲೆ ಹೇಳಿದ ಕೆಲವು ವಿಚಾರಗಳನ್ನು ಗಮನಿಸಿದರೆ ನಮ್ಮ ದೇಶದ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಸಾತ್ವಿಕ ಆಹಾರಕ್ರಮ ಹಾಗೂ ನಡೆನುಡಿ, ಕುಟುಂಬ ಜೀವನ, ಆಧ್ಯಾತ್ಮಿಕ ದೃಷ್ಟಿಕೋನ, ಕೃಷಿ ಆಧಾರಿತ ಉದ್ಯೋಗಗಳಿಂದ ಸಮ್ಮಿಳಿತವಾದ ಜೀವನ ಶೈಲಿಯು ಆರೋಗ್ಯಪೂರ್ಣ ಜೀವನ ನಡೆಸಲು ಅತ್ಯುತ್ತಮವಾದುದೆಂದು ಆಧುನಿಕ ವೈದ್ಯಕೀಯ ವಿಜ್ಞಾನ ಪರೋಕ್ಷವಾಗಿ ಸಾರಿ ಹೇಳುತ್ತಿದೆ. ಭಾರತೀಯರಾದ ನಾವು ಅದರಲ್ಲೂ ಬ್ರಾಹ್ಮಣವರ್ಗದವರು ಈ ಜೀವನಶೈಲಿಯನ್ನು ಅನಾಯಸವಾಗಿ ಬಳುವಳಿಯಾಗಿ ಪಡೆದಿದ್ದೇವೆ. ಇದನ್ನರಿತು ಪಾಶ್ಚಾತ್ಯ ಜೀವನಶೈಲಿಗೆ ಮಾರುಹೋಗದೆ ನಮ್ಮತನವನ್ನು ಉಳಿಸಿಕೊಂಡರೆ ಸುಖೀಜೀವನ ಖಂಡಿತ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.

### ವೈದ್ಯಕೀಯ ನೆರವು ವೇದಿಕೆ

### ಪ್ರಕಟಣೆ

### ಆರೋಗ್ಯ ಮಾಹಿತಿ ಬೇಕೆ? ಶ್ರೀ ಶಾರದಾ ಪತ್ರಿಕೆಗೆ ಬರೆಯಿರಿ!

ಆರೋಗ್ಯ ಮಾಹಿತಿ ಬಗ್ಗೆ ಸಮಸ್ಯೆಗಳೇನಾದರೂ ಇದ್ದರೆ ಪ್ರಶ್ನೆಗಳ ಮೂಲಕ ವಿವರಗಳನ್ನು ಬರೆದು ಕಳುಹಿಸಿದಲ್ಲಿ ಬೇರೆ ಬೇರೆ ವೈದ್ಯಕೀಯ ವಿಭಾಗಗಳಿಗೆ ಸಂಬಂಧಪಟ್ಟ ತಜ್ಞ ವೈದ್ಯರಿಂದ ಚರ್ಚಿಸಿ ಉತ್ತರಗಳನ್ನು ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಊರು, ಹೆಸರು ಪ್ರಕಟಿಸುವ ಅಗತ್ಯವಿಲ್ಲದಿದ್ದರೆ ಹಾಗೆಯೇ ಪ್ರಕಟಿಸಲಾಗುವುದು. ಆಸಕ್ತರು ಪ್ರಶ್ನೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ವೈದ್ಯಕೀಯ ನೆರವು ವೇದಿಕೆಯ ಪ್ರಕಟಣೆಯ ತಿಳಿಸಿದೆ.

**- ಅಧ್ಯಕ್ಷರು, ವೈದ್ಯಕೀಯ ನೆರವು ವೇದಿಕೆ**

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಕೊಕ್ರಾಡಿ, ಬೆಳ್ತಂಗಡಿ ತಾಲೂಕು, ದ.ಕ.

ಆಸ್ತಿಕ ಬಾಂಧವರಲ್ಲಿ ನಿವೇದನೆ,

ಜನರ ಭಕ್ತಿ ಶ್ರದ್ಧೆಗಳ ಕೇಂದ್ರವಾದ ದೇವಾಲಯಗಳು ನಮ್ಮ ಸಂಸ್ಕೃತಿಯ ಸಂವರ್ಧನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಸುಮಾರು 800 ವರ್ಷಗಳ ಹಿಂದೆ ಪ್ರತಿಷ್ಠಾಪನೆಗೊಂಡು ತುಳುನಾಡಿನ ಬೈರವ ಅರಸರ ಕಾಲದಲ್ಲಿ ನಾರಾವಿ ಮಾಗಣೆಗೆ ಒಳಪಟ್ಟ ಕೊಕ್ರಾಡಿ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರ ಅತಿಶಯ ಭಕ್ತಿಯ ಕೇಂದ್ರ ಶಾಲಿಪುರ (ಸಾಲಿಯೂರು) ಶ್ರೀ ಸುಬ್ರಹ್ಮಣ್ಯ ದೇವಾಲಯ.

ಗುರುವಾಯನಕೆರೆ ನಾರಾವಿ ರಾಜಮಾರ್ಗದಲ್ಲಿ ಗುರುವಾಯನಕೆರೆಯಿಂದ ಸುಮಾರು 17ಕಿ.ಮೀ. ದೂರದಲ್ಲಿ ಹಾಗೂ ವೇಣೂರು – ನಾರಾವಿ ಮಾರ್ಗದಲ್ಲಿ ವೇಣೂರಿನಿಂದ 11ಕಿ.ಮೀ. ದೂರದ ಕೊಕ್ರಾಡಿ ಗ್ರಾಮದಲ್ಲಿ ನಯನ ಮನೋಹರ ರಮಣೀಯ ಸ್ಥಳದಲ್ಲಿ ಈ ದೇವಾಲಯವಿದೆ. ಇಲ್ಲಿ ಪ್ರಧಾನ ದೇವರು ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಉಪದೇವತೆಯಾಗಿ ಶ್ರೀ ಮಹಾಗಣಪತಿ ದೇವರು, ಮೂಲಶಕ್ತಿಯಾಗಿ ಶ್ರೀ ನಾಗದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಲ್ಲದೆ ಈ ಪುಣ್ಯಕ್ಷೇತ್ರದಲ್ಲಿ ಕೊಡಮಣಿತ್ತಾಯ ಪಂಜುರ್ಲಿ ಮತ್ತು ರಕ್ತೇಶ್ವರಿಯಾದಿ ಪಂಚದೈವಗಳ ಸಾನ್ನಿಧ್ಯವಿದೆ. ಸದ್ಯ ದೇವಸ್ಥಾನ ಜೀರ್ಣಾವಸ್ಥೆಯಲ್ಲಿದ್ದು ಶೀಘ್ರಾತಿಶೀಘ್ರ ಜೀರ್ಣೋದ್ಧಾರಗೊಳ್ಳಬೇಕಾದ ತುರ್ತು ಅವಶ್ಯಕತೆ ಇದೆ. ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹ ಪಡೆದು ಈ ಕೆಲಸಕ್ಕೆ ನಾವು ತೊಡಗಿರುತ್ತೇವೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳು ಸಂರಕ್ಷಕರಾಗಿ ನಮ್ಮನ್ನು ಮುನ್ನಡೆಸಲು ಅನುಗ್ರಹಿಸಿರುತ್ತಾರೆ. ತಾ.04–12–2008 ರಂದು ಶಿಲಾಮುಹೂರ್ತದಿಂದ ಮೊದಲ್ಗೊಂಡು ಶಿಲಾಮಯ ಗರ್ಭಗುಡಿ, ತೀರ್ಥಮಂಟಪ ಹಾಗೂ ಗಣಪತಿ ದೇವರ ಗುಡಿಗಳನ್ನು ನಿರ್ಮಿಸಲು ಸಂಕಲ್ಪಿಸಲಾಗಿದೆ. ಸುತ್ತುಪೌಳಿ, ವಸಂತ ಮಂಟಪ, ಅಡುಗೆ ಕೋಣೆ, ತೀರ್ಥಬಾವಿ, ದೇವಾಲಯದ ಕಾರ್ಯಾಲಯ ಹಾಗೂ ದೈವಗಳ ಗುಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗೆ ರೂಪ್ಾಯಿ 50ಲಕ್ಷ ವೆಚ್ಚ ತಗಲುವುದೆಂದು ಅಂದಾಜಿಸಲಾಗಿದೆ.

ಈಗಾಗಲೇ ದಿನಾಂಕ 18–08–2007ರಂದು ಶ್ರೀ ಮುನಿಯಂಗಳ ಮಹೇಶ ಭಟ್ಟರ ನಿರ್ದೇಶನದಲ್ಲಿ ಶ್ರೀ ನಾಗದೇವರಿಗೆ ಸುಮಾರು ರೂಪ್ಾಯಿ ಒಂದು ಲಕ್ಷ ವೆಚ್ಚದಲ್ಲಿ ನೂತನ ಚಿತ್ರಕೂಟವನ್ನು ನಿರ್ಮಿಸಿ ದೇವಸ್ಥಾನದಲ್ಲಿದ್ದ 18 ಪುರಾತನ ನಾಗಬಿಂಬಗಳನ್ನು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪುನಃಪ್ರತಿಷ್ಠಾಪಿಸಲಾಗಿದೆ.

ಈಗ ಕೈಗೆತ್ತಿಕೊಂಡಿರುವ ಸಂಪೂರ್ಣ ಜೀರ್ಣೋದ್ಧಾರ ಕೆಲಸವು ಶ್ರೀದೇವರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹದಿಂದ, ಭಕ್ತಮಹಾಜನರ ತನು–ಮನ–ಧನಗಳ ಸಹಕಾರದಿಂದ ನಡೆಯಬೇಕಾಗಿದೆ. ಬಿಂದುಗಳು ಕೂಡಿ ಸಿಂಧುವಾಗಬೇಕಾಗಿದೆ. ಇದನ್ನು ಮನಗಂಡು ಆಸ್ತಿಕ ಮಹಾಜನರು ಈ ಧಾರ್ಮಿಕ ಮಹಾಕಾರ್ಯಕ್ರಮಕ್ಕೆ ಸರ್ವರೀತಿಯ ಸಹಾಯ ಮಾಡಬೇಕಾಗಿ ವಿನಂತಿಸುತ್ತೇವೆ.

ತಮಗೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಶ್ರೀ ಮಹಾಗಣಪತಿ, ಶ್ರೀ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹವಾಗಿ ಸಕಲ ಸನ್ಮಂಗಲವು ಲಭಿಸಲೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

**– ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವಸದಸ್ಯರು, ಜೀರ್ಣೋದ್ಧಾರ ಸಮಿತಿ.**

## ಸ್ಥಾನಿಕ ಬ್ರಾಹ್ಮಣ ಯುವ ಸಮಾವೇಶ

# ದಶಮಾನೋತ್ಸವ

ಪ್ರಿಯರೇ,

ಸ್ವಸ್ತಿ! ಶ್ರೀ ಸರ್ವಧಾರಿ ನಾಮ ಸಂವತ್ಸರದ ಮಕರ ಮಾಸ 19 ಸಲುವ ತಾ.01-02-2009ರಂದು ಆದಿತ್ಯವಾರ ಪೂ.ಗಂಟೆ 9-00ರಿಂದ ಸಂಜೆ 5-00ರ ವರೆಗೆ

**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರಿನಲ್ಲಿ**

**ಸ್ಥಾನಿಕ ಬ್ರಾಹ್ಮಣ ಯುವ ಸಮಾವೇಶದ ದಶಮಾನೋತ್ಸವ**

ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳೊಂದಿಗೆ ನಡೆಯಲಿರುವುದು.

| | | |
|---|---|---|
| ಬೆಳಿಗ್ಗೆ 9-00 | : | ಉದ್ಘಾಟನಾ ಸಮಾರಂಭ<br>ಪ್ರಸಕ್ತ ಸಾಲಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಂದ |
| ಬೆಳಿಗ್ಗೆ 9-30ರಿಂದ 12-00 | : | ವಿವಿಧ ಸ್ಪರ್ಧೆಗಳು |
| ಮಧ್ಯಾಹ್ನ ಗಂಟೆ 12-00ರಿಂದ | : | 'ಚಿಂತನ-ಮಂಥನ' |
| ವಿಷಯ | : | ಪ್ರಸಕ್ತ ರಾಜಕೀಯದಲ್ಲಿ ಬ್ರಾಹ್ಮಣರ ಪಾತ್ರ ಅನಿವಾರ್ಯವೇ? |
| ನಡೆಸಿಕೊಡುವವರು | : | ಶ್ರೀ ಬಾಲಕೃಷ್ಣ ರಾವ್, ಪ್ರಭಾರ ಪ್ರಾಂಶುಪಾಲರು<br>ಸರಕಾರಿ ಪದವಿಪೂರ್ವ ಕಾಲೇಜು, ಕುರ್ನಾಡು, ಮುಡಿಪು. |
| ಮಧ್ಯಾಹ್ನ ಗಂಟೆ 1-00ರಿಂದ | : | ಭೋಜನ |
| ಅಪರಾಹ್ನ ಗಂಟೆ 2-00ರಿಂದ | : | ವಿವಿಧ ಸ್ಪರ್ಧೆಗಳು |
| ಅ.ಗಂಟೆ 3-00ರಿಂದ 4-00 | : | ಮನೋರಂಜನಾ ಕಾರ್ಯಕ್ರಮ |
| ಸಂಜೆ ಗಂಟೆ 4-00ರಿಂದ 5-00 | : | ಸಮಾರೋಪ ಸಮಾರಂಭ |
| ಅಧ್ಯಕ್ಷರು | : | ಡಾ। ಬಿ. ಎಚ್. ಆನಂದ ರಾವ್<br>ಮುಖ್ಯಸ್ಥರು, ಸರ್ಜರಿ ವಿಭಾಗ, ಕೆ.ಎಂ.ಸಿ. ಆಸ್ಪತ್ರೆ, ಮಣಿಪಾಲ |
| ಮುಖ್ಯ ಅತಿಥಿಗಳು | : | ಶ್ರೀ ಶಿವಪ್ರಸಾದ್ ಕ್ಯಾದಿಗೆ, ಕ್ಯಾದಿಗೆ ಪ್ರಿಸಿಷನ್ಸ್, ಬೆಂಗಳೂರು<br>ಶ್ರೀ ರಾಜೇಂದ್ರ ಪೆರ್ಲ,<br>ಶಿಕ್ಷಕರು, ಸತ್ಯನಾರಾಯಣ ಹೈಸ್ಕೂಲ್, ಪೆರ್ಲ |

**ಸ್ಥಾನಿಕ ಬ್ರಾಹ್ಮಣ ಸಮಾಜದ ಯುವಕ-ಯುವತಿಯರು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಮಾರಂಭದ ಸದುಪಯೋಗ ಪಡೆಯುವಂತೆ ಆಶಿಸುವ,**

| | | |
|---|---|---|
| **ನಿಕ್ಷೇಪ್ ಕೇದಗೆ**<br>ಅಧ್ಯಕ್ಷರು | | **ನವನೀತ್ ಕುಮಾರ್ ವಿ.ಎ.**<br>ಕಾರ್ಯದರ್ಶಿ |
| **ಎ. ರಜತ್ ಕುಮಾರ್**<br>**ಪ್ರೀತಿಕಾ ಹರ್ಷಕುಮಾರ್**<br>ಉಪಾಧ್ಯಕ್ಷರುಗಳು | **ನಟೇಶ್ ರಾವ್ ಬಿ.**<br>ಖಜಾಂಚಿ<br>ಕಾರ್ಯಕಾರಿ ಸಮಿತಿ | **ಹರಿಪ್ರಸಾದ್ ಚೆಟ್ಟಂಪಾಡಿ**<br>**ಕೆ. ಮಾನಸ ಹೆಬ್ಬಾರ್**<br>ಜೊತೆ ಕಾರ್ಯದರ್ಶಿಗಳು |

### ಸ್ಪರ್ಧೆಯ ವಿವರಗಳು :

5 ವರ್ಷದೊಳಗಿನ ಮಕ್ಕಳಿಗೆ – ಬೇಬಿ ಶೋ

5 ವರ್ಷದಿಂದ 10 ವರ್ಷದೊಳಗಿನ ಮಕ್ಕಳಿಗೆ–11 ವರ್ಷದಿಂದ 16 ವರ್ಷದೊಳಗಿನ ಮಕ್ಕಳಿಗೆ – ಛದ್ಮವೇಷ ಸ್ಪರ್ಧೆ, ಸಂಗೀತ ಸ್ಪರ್ಧೆ, ಬಿಂದಿ ಹಚ್ಚುವುದು, ಒಂಟಿಕಾಲಿನ ಓಟ, ವರ್ಣಚಿತ್ರ ಬಿಡಿಸುವುದು, ಸ್ಮರಣ ಶಕ್ತಿ. 16 ವರ್ಷಕ್ಕಿಂತ ಮೇಲ್ಪಟ್ಟವರಿಗೆ – ಹಣ್ಣು ತಿನ್ನುವ ಸ್ಪರ್ಧೆ, ಸಂಗೀತ ಸ್ಪರ್ಧೆ, ವಿಕೆಟ್ ಶೂಟಿಂಗ್, ರಂಗೋಲಿ, ಸ್ಮರಣ ಶಕ್ತಿ ಸ್ಪರ್ಧೆ, ಹಗ್ಗಜಗ್ಗಾಟ.

ಅಪರಾಹ್ನ ಗಂಟೆ 2–00ರಿಂದ 3–00 ವಿವಿಧ ವಿಭಾಗಗಳಿಗೆ –

ಪಿಕ್ & ಆ್ಯಕ್ಟ್ ಸ್ಪರ್ಧೆ, ನೃತ್ಯ ಸ್ಪರ್ಧೆ, ಸಂಗೀತ ಕುರ್ಚಿ, ಸರ್ಪ್ರೈಸ್ ಗೇಮ್ಸ್

ಅಪರಾಹ್ನ ಗಂಟೆ 3–00ರಿಂದ 4–00 – ಸಾಂಸ್ಕೃತಿಕ ಕಾರ್ಯಕ್ರಮ

ಸಂಜೆ ಗಂಟೆ 4–00ರಿಂದ 5–00 – ಸಮಾರೋಪ ಸಮಾರಂಭ

ಬೆಳಗ್ಗಿನ ಸ್ಪರ್ಧೆಗಳಲ್ಲಿ ಭಾಗವಹಿಸುವವರು 9–00 ಗಂಟೆಗೆ ಸಭಾಂಗಣದಲ್ಲಿ ಹಾಜರಿರತಕ್ಕದ್ದು. ಮಧ್ಯಾಹ್ನದ ಸ್ಪರ್ಧೆಗಳಲ್ಲಿ ಭಾಗವಹಿಸುವವರು 12–00 ಗಂಟೆಯ ಒಳಗೆ ಹೆಸರನ್ನು ನೋಂದಾಯಿಸಬೇಕು.

## ವಧು-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ತಾ.25-01-2009ರ ರವಿವಾರ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದ ದಿನ ನಮ್ಮ ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

### ಬೇಕಾಗಿದ್ದಾರೆ

### ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು

ಎಲ್.ನಂ.366, ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು – 3.

**ಹುದ್ದೆ: ಅಸಿಸ್ಟೆಂಟ್ ಮೇನೇಜರ್**

**ಅರ್ಹತೆ : ಬಿಕಾಂ ಅಥವಾ ಜಿಡಿಸಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಪದವಿ ಮತ್ತು ಸಹಕಾರಿ ಸಂಘ/ಬ್ಯಾಂಕ್‌ಗಳಲ್ಲಿ ಕೆಲಸದ ಅನುಭವ**

*ಕೂಡಲೇ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ :*

**- ಕಾರ್ಯದರ್ಶಿ**


## ದೇವಿಕೃಪಾ ಏಜೆನ್ಸೀಸ್, ನಂದಿಕೂರು



**ಫೋನ್ : 2556536 (R), 2555466 (O)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


### ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ–ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org